
ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಚಿಕೆಗಳಿಗೆ ಅನುದಾನವಿತ್ತವರು

# ಭಾರತೀಯ ಭಾಷಾ ಸಂಸ್ಥಾನ

## ಮಾನಸ ಗಂಗೋತ್ರಿ,

## ಮೈಸೂರು

Published with Financial Assistance from the Central Institute of Indian Languages

(Ministry of Human Resource Development, Department of Higher Education, Govt of India)

**Manasagangothri, Mysore-570006**

**Sanctioned vide letter 53-4(5)/2009-10/KAN/LM/GRNT dated June 18, 2010 Under the scheme of 'Grant in Aid'**



A Circumnavigation to the world of Dance and Performing Arts : A complete Journal

ನೂಪುರ ಭ್ರಮರಿ
... ನರ್ತನ ಜಗತ್ತಿಗೊಂದು ಪರಿಭ್ರಮಣ

RNI No :KARKAN/2009/29752
ಅಶ್ವೀಜ-ಕಾರ್ತಿಕ **2010**
ಸಂಚಿಕೆ : **5** ಸಂಪುಟ : **4**

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ವೆಬ್‌ಸೈಟ್ ನಿರ್ವಹಣೆ : ಮಹೇಶ್ ಎಳ್ಯಡ್ಕ,
ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್.
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ
ಮುಖಪುಟ : ಪ್ರವೀಣ್ ಬಣಗಿ

## ಅಂತರಂಗದೊಳಗೆ.....


**ಶರದ್ ಸಂಭ್ರಮ**

ಮಂಜೀರ ..... 4
ದೀವಟಿಗೆ – ಬೃಹದೀಶ್ವರನಿಗೆ ಬೃಹನ್ನಾಟ್ಯ ಯಜ್ಞ ..... 6
ಅಂಗಳದ ಮಾತು ತಿಂಗಳ ಚರ್ಚೆ – ಕಾಳಿಂಗ ನಾವುಡ ..... 7
ನರ್ತನ ಸುರಭಿ : ನೃತ್ಯ-ಅಂದು, ಇಂದು, ಮುಂದು ..... 8
ಲಲಿತ ಲಹರಿ : ಸೀತೆಯ ಸ್ವಗತ ..... 10
ನಿಮ್ಮ ಬರೆಹ ನಮ್ಮ ಓದು ..... 17
ಹಸ್ತ ಮಯೂರಿ : ಹಂಸಾಸ್ಯ ಹಸ್ತ ..... 18
ಒಳನೋಟ ..... 21
ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ ..... 22
ರಂಗಸ್ಥಳ : ಋತುಪರ್ಣನನ್ನು ಕಾಣುವಾಗ ನೆನಪಾಗುವುದು ರೈಗಳು! ..... 24

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own not of Noopura Bhramari.

Visit our website : **www.noopurabhramari.com** for the latest news, views and other updates.

ನೂಪುರ ಭ್ರಮರಿಗೆ ಲೇಖನ-ವಿವರ-ವಿಚಾರ-ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ಎರಡನೇ ತಿಂಗಳ **10**ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



## ಮಂಜೀರ

ಭರತನಾಟ್ಯ ನೃತ್ಯ ಕಾರ್ಯಕ್ರಮವದು. ಅರೆ, ಜತಿಸ್ವರದ ಜತಿ–ಕೋರ್ವೆಗಳನ್ನು ಬೇರೊಂದು ರಾಗದ ಅದೇ ತಾಳದ ನೃತ್ಯಬಂಧವೊಂದರಲ್ಲಿ ಕಂಡ ನೆನಪು. ಶಬ್ದಬಂಧವನ್ನು ಗಮನಿಸಿದರೆ ಅದರಲ್ಲೂ ಒಂದೇ ತೆರನಾದ ಭಾವ. ವರ್ಣವನ್ನು ನೋಡುವ ಹೊತ್ತಿಗೆ, ನಿಚ್ಚಳವಾಯಿತು ; ಯಾವುದೋ ಜತಿಸ್ವರ, ಶಬ್ದ, ವರ್ಣಗಳ ಜತಿ–ಕೋರ್ವೆಗಳ ಯಥಾವತ್ತು ನಕಲು ಎಂದು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಮತ್ತೊಂದು ರೂಪಕದಲ್ಲಿ ಎರಡು ಜತಿಗಳನ್ನು ಹೆಣೆದು ಮಾಡಿರುವ ಮಿಕ್ಸಡ್ ಅಡುಗೆ ಎನ್ನುವುದು ಮತ್ತಷ್ಟು ಸ್ಪಷ್ಟ ! ಹಾಡು ಹಳೆಯದಾದರೇನು ; ಭಾವ ನವನವೀನ ಎನ್ನೋಣವೇ? ಉಹುಂ..ಒಂದಿಂಚೂ ಅವಕಾಶವಿಲ್ಲ.

ಇದೇನು ಹೊಸತಲ್ಲ. ಕಂಡಕಂಡಲ್ಲಿ ಬೀದಿಗೊಂದರಂತೆ ಡ್ಯಾನ್ಸ್ ಕ್ಲಾಸ್ ಎಂಬ ಅಂಗಡಿ ತೆರೆದರೂ ಪುಟ್ಟ ಜತಿಯನ್ನು ಹೆಣೆಯಲು ಬಾರದ ಗುರು–ಕಲಾವಿದರುಗಳ ಅರ್ಹತೆಗೆ (?) ತಕ್ಕುದಾಗಿ ಸಿದ್ಧವಾಗುವ ಬೇರೆ ಜತಿಗಳಿಂದಾಯ್ದ ರೆಡಿಮೇಡ್ ಪದಾರ್ಥಗಳು ; ಅಪ್ಪ ಹಾಕಿದ ಆಲದ ಮರ ಎಂದು ಗುರುಗಳು ಹೇಳಿಕೊಟ್ಟ ಜತಿನಿರೂಪಣೆಯ ಯಥಾವತ್ತು ನಕಲಿನಿಂದಾಗಿ ಜತಿಗಳು ಪುನರಾವರ್ತನೆಯಾಗುವುದು ಮಾಮೂಲಿಯೆನಿಸಿದೆ. ಹೀಗಾಗಿ ಹೊಸತೆನಿಸುವ, ಸವಾಲೆನಿಸುವ ಜತಿಗಳ ನಿರ್ವಹಣೆ ಮತ್ತು ನೈಜವೆನಿಸುವ ಉತ್ಪತ್ತಿಗಳು ಕಂಡುಬಂದರೆ ಅದೇ ಸೌಭಾಗ್ಯವೆನ್ನಿಸಿದೆ. ಅದರಲ್ಲೂ ದಶಕಗಳಿಂದಲೂ ಕರ್ನಾಟಕದ ಅನೇಕ ಕಲಾವಿದರಿಗಿದು ಅನೂಚಾನ ಪದ್ಧತಿ.

ಜತಿಯೆಂಬುದು ಅಭಿನಯರಹಿತವಾದ ಅಂಗವಿನ್ಯಾಸಗಳನ್ನೊಳಗೊಂಡ ಶುದ್ಧ ನೃತ್ತ. ಮೃದಂಗ, ತಬಲ, ತಾಳ ಮುಂತಾದ ವಾದ್ಯಗಳಿಂದ ಬರುವ ಶಬ್ದಗಳನ್ನು ಕೆಲವು ಅಕ್ಷರಗಳಿಂದ ಗುರುತಿಸಿ, ನುಡಿಕಾರಗಳನ್ನು ತಾಳಾವರ್ತನಕ್ಕೆ ಹೊಂದಿಸಿ ರಚನೆ ಮಾಡಿದುದಾಗಿರುತ್ತದೆ. ಜತಿಯೆಂಬುದು ನರ್ತನದ ಅಡಿಪಾಯ ; ಭರತನಾಟ್ಯದ ಅನಿವಾರ್ಯ ಅವಶ್ಯಕತೆ. ಯಾವ ವಿಧವಾದ ಅರ್ಥ, ವಿಚಾರ, ಸನ್ನಿವೇಶಗಳನ್ನು ಬಳಸದೆ ಅಂಗಗಳ ಚಲನೆಯಿಂದ ಲಾಲಿತ್ಯಮಯವಾಗಿಯೂ ಸುಂದರ ರಚನೆಗಳನ್ನು ನಿರೂಪಿಸುವುದು ಜತಿಯ ಅಸಾಧಾರಣ ಶಕ್ತಿ. ತಾಳ, ಲಯ, ಪಾಠಾಕ್ಷರ, ಅಡವು ಮತ್ತು ಕರಣಗಳನ್ನು ತೀರ್ಮಾನ ಸಹಿತವಾಗಿ ಸಂಘಟಿಸಲಾಗುವ ಇದರಿಂದ ಕೇವಲ ರಂಜನೆಯಷ್ಟೇ ಅಲ್ಲದೆ ; ನೃತ್ಯ ಮತ್ತು ಸಂಗೀತ ವಾದ್ಯಗಳೊಳಗೆ ಸಾಂಗತ್ಯವು ಏರ್ಪಡಲು, ವಿವಿಧ ವಿಕ್ಷೇಪಗಳನ್ನು ನೆನಪಿನಲ್ಲಿರಿಸಲೂ ಸಹಕರಿಸುತ್ತದೆ. ಗತಿಭೇಧ ನಡೆಗಳುಳ್ಳ ಜತಿಯನ್ನು ವಿದ್ವತ್ಪೂರ್ಣ ನಟ್ಟುವನ್ನಾರ್‌ಗಳಿಂದ ಕೇಳುವುದಕ್ಕೆ ಸ್ವಾರಸ್ಯ ಮಾತ್ರವಲ್ಲದೆ ಕಲಾವಿದರ ಪ್ರತಿಭೆಗೆ ಕನ್ನಡಿಯೂ ಹೌದು.

ಜತಿಗಳ ಸಂಯೋಜನೆಯೂ ಆಕರ್ಷಕ. ಪಾತ್ರ ಜತಿ, ಮುಖ ಜತಿ, ಅಂತ್ಯ ಜತಿ, ಮುಕುಟ ಜತಿ, ನಿಲುಗಡೆ ಜತಿ, ಮೇಳ ಪ್ರಾಪ್ತಿ ಜತಿ, ಅಡವು ಜತಿ, ತ್ರಿಕಾಲ ಜತಿ ಹೀಗೆ ಹಲವು ವಿಧಗಳೂ ಮತ್ತು ಅವುಗಳ ನಿರೂಪಣಾ ವೈಶಿಷ್ಟ್ಯಗಳು, ನಿಯಮ ಬದ್ಧತೆಗಳೂ ಇವೆ. ಆದರೆ ಇತ್ತೀಚೆಗಿನ ಬಹಳಷ್ಟು ನೃತ್ಯಬಂಧ, ರೂಪಕಗಳಲ್ಲಿ ಜತಿಗಳ ವಿಶೇಷತೆ, ಕ್ರಮ–ಬದ್ಧತೆಗಳನ್ನರಿಯದೆ ಒಟ್ಟಾರೆ ಬಳಸುವುದು ಅಭ್ಯಾಸವೆಂಬಂತೆ ಆಗಿಹೋಗಿದೆ. ನೆರೆದವರ ಶಹಬ್ಬಾಸ್‌ಗಿರಿ ಗಿಟ್ಟಿಸುವ ನೆವದಲ್ಲಿ ಭಾವ ರಸಗಳಿಗೆ ತೊಂದರೆಯಾಗುವುದೆಂಬ ಪರಿಜ್ಞಾನವೂ ಇಲ್ಲದೆ ಅಳತೆ ಮೀರಿ ಜತಿಗಳನ್ನು ಅಳವಡಿಸುವುದೂ ಇದೆ.

ವರ್ಣಗಳಲ್ಲಂತೂ ರಸ ನಿರ್ವಹಣೆಗೆ ಭಂಗ ಬರುವಷ್ಟರ ಮಟ್ಟಿಗೆ ಚ್ಯೂಯಿಂಗ್‌ಗಮ್‌ನಂತೆ ಪಾಠಾಕ್ಷರಗಳನ್ನು ಮನಬಂದಂತೆ ಎಳೆಯುವುದರಿಂದಾಗಿ ಕಡಲೆಯೊಂದಿಗೆ ಕಲ್ಲನ್ನೂ ಅಗಿದಂತಾಗುವುದಂತೂ ನಿಜ. ಇದರೊಂದಿಗೆ

ಲಾಸ್ಯ ಭಾವ, ಗತಿಗಳಿಗೆ ಅಸಹಜವೆಂಬಂತೆ ತೋರುವ ತಾಂಡವ ಜಾತಿಯ ಜತಿಗಳನ್ನು ಸಂಯೋಜಿಸುವುದು, ವಿರಹೋತ್ಕಂಠಿತ ನಾಯಕಿ ಕ್ಷಣಮಾತ್ರದಲ್ಲೇ ಚಕ್ಕನೆ ನೆಗೆದು, ಕುಣಿದು ಮರುಕ್ಷಣಕ್ಕೆ ವಿರಹ, ದುಃಖವನ್ನು ನಟಿಸುವುದು..; ಅಭಿನಯದ ವ್ಯಾಖ್ಯಾನಗಳನ್ನೇ ತಿರುವುಮುರುವನ್ನಾಗಿಸಿದೆ.

ಆದರೆ ಇವೆಲ್ಲವನ್ನೂ 'ಸರಿ' ಎಂಬರ್ಥದಲ್ಲಿ ಗುರುಗಳೆನಿಸಿಕೊಂಡವರು ಒಪ್ಪಿಕೊಂಡಿರುವುದು, ಪ್ರೇಕ್ಷಕರು ಮರುಮಾತಿಲ್ಲದೇ ಒಪ್ಪಿಕೊಳ್ಳುವಂತೆ ಮಾಡಿರುವುದು ದುರದೃಷ್ಟ. ತಕ್ಕಮಟ್ಟಿನ ಬದಲಾವಣೆ ತಂದರೆ 'ಶಾಸ್ತ್ರದ್ರೋಹ'(ತಾವು ಅರಿಯದ)ವಾಗಿಬಿಡಬಹುದೋ ಎನ್ನುವ ಆತಂಕ ಮತ್ತು ಕಟ್ಟುನಿಟ್ಟಿನ ಅರ್ಥಹೀನ ಶಿಸ್ತು. ಹಾಗಾಗಿ ಯಥಾವತ್ತು ಸ್ಥಿತಿಯನ್ನು ಎಲ್ಲಾ ಕಾರ್ಯಕ್ರಮಗಳಲ್ಲೂ ಕಾಯ್ದುಕೊಂಡು ವಿದ್ವತ್ಪೂರ್ಣ ರಚನೆಗಳಾಗಬೇಕಿದ್ದ ವರ್ಣದಂತಹ ನೃತ್ಯಬಂಧವನ್ನು ಭಾವ-ರಸವಿಹೀನವಾಗಿಸಲಾಗುತ್ತಿದೆ. ಹಾಗೆಂದು ಬದಲಾವಣೆ ಬಯಸಿದಿರೋ ಕಂಡಕಂಡಲ್ಲೆಲ್ಲಾ ಹೊಸತೆಂದು ಕಂಡರೂ ಅಸಂಬದ್ಧ ಜತಿಗಳನ್ನು ತುರುಕಲಾಗುತ್ತಿದೆ. ಒಳ್ಳೆಯ ಜತಿ ನಿರೂಪಣೆ ಎಲ್ಲೋ ಒಂದೆರಡು ಬಾರಿ ; ಅದೂ ಅಪೂರ್ವಕ್ಕೆ ಎಂಬಂತೆ !

ಪ್ರೇಕ್ಷಕರು ಮತ್ತು ನಟ ವರ್ಗದವರು ದೈಹಿಕವಾಗಿ ಮಾನಸಿಕವಾಗಿ ನರ್ತನದ ಪ್ರಧಾನ ಆಶಯಕ್ಕೆ ಸಿದ್ಧರಾಗುವುದು ಜತಿಯಿಂದಾಗಿ. ಅದು ನಿಯಮವೂ ಹೌದು. ಈ ನಿಟ್ಟಿನಲ್ಲಿ ಡಾ. ಪದ್ಮಾ ಸುಬ್ರಹ್ಮಣ್ಯಂ ಜತಿ ನಿರೂಪಣೆಯನ್ನು ಕರಣಗಳ ಸಮೇತ ಸವಾಲೆಂಬಂತೆ ಸಹಜವೆನಿಸುವಂತೆ ನರ್ತನದ ವಸ್ತುವಿನ ಭಾವ ದಲ್ಲಿಯೇ ಬಳಸುತ್ತಾರೆ. ಇಂತಹ ಜತಿ ನಿರೂಪಣೆ ಎಲ್ಲರಿಂದಲೂ ಅಸಾಧುವಾದರೂ ತಕ್ಕಮಟ್ಟಿನ ಸಮಯ-ಸಹಜಪ್ರಜ್ಞೆಯುಳ್ಳ ಜತಿಯ ಬಳಕೆ, ನೈಜ ಅಭಿವ್ಯಕ್ತಿ, ಪುಟ್ಟದಾದರೂ ಗಟ್ಟಿತನದ ಸ್ವತಂತ್ರ ಸಂಯೋಜನೆ ಕಲಾವಿದರ ನೃತ್ತ ಸಮಯವನ್ನು ಆರೋಗ್ಯವಾಗಿರಿಸುವುದಲ್ಲದೆ, ನೃತ್ಯವನ್ನು ಜೀವಂತವಾಗಿರಿಸುತ್ತದೆ ; ನರ್ತನದ ಆಯುಷ್ಯವನ್ನು ಹೆಚ್ಚಿಸುತ್ತದೆ.

**ಪ್ರೀತಿಯಿಂದ**

❁ **ಸಂಪಾದಕರು**

**ನಿಮಗಿಷ್ಟವಾದ ಹಿರಿ-ಕಿರಿಯ ಕಲಾವಿದ ಅಥವಾ ಕಲಾವಿದೆಯ ಸೊಗಸು, ಕೊಡುಗೆ, ಮಾದರಿ, ವಿಶೇಷತೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸುತ್ತಿದೆಯೇ? ಹಾಗಿದ್ದರೆ ತಡವೇಕೆ. ನೂಪುರ ಭ್ರಮರಿಯ 'ಲೋಕ ಭ್ರಮರಿ' ಅಂಕಣಕ್ಕೆ ಬರೆಯಿರಿ; ಅಂಕಣವನ್ನು ಸಮೃದ್ಧಗೊಳಿಸಿ. ನೃತ್ಯ ಕ್ಷೇತ್ರದಲ್ಲಿ ಒಳ್ಳೆಯ ಭವಿಷ್ಯ ಹೊಂದಿರುವ /ಹೊಂದಲಿರುವ, ಭರತನಾಟ್ಯ, ಯಕ್ಷಗಾನ, ಒಡಿಸ್ಸಿ, ಕಥಕ್, ಮಣಿಪುರಿ, ಕೂಚಿಪುಡಿ, ಮೋಹಿನಿಯಾಟ್ಟಂ, ಕಥಕಳಿಯಾದಿಯಾಗಿ ಶಾಸ್ತ್ರೀಯ, ಜನಪದ ನರ್ತನ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ನೀವಿಷ್ಟಪಡುವ ಕಲಾವಿದರ ಪರಿಚಯ, ಮಾಹಿತಿ, ನಿಮಗಿಷ್ಟವಾದ ಪಾತ್ರ-ಸನ್ನಿವೇಶ-ಘಟನೆಗಳನ್ನು ಬರೆದು ಕಳಿಸಿ. ತಕ್ಕುದಾದ ಫೋಟೋವಿದ್ದರೆ ಸೂಕ್ತ. ಆದರೊಂದು ವಿನಂತಿ. ವೈಭೋಗದ ಅತಿರಂಜಿತ ವರ್ಣನೆಗಳು, ರಂಗಪ್ರವೇಶ ಅಥವಾ ಇನ್ನಿತರ ಪರಿಚಯ ಕಾರ್ಯಕ್ರಮಗಳ ಆಡಂಬರದ ಮಾಹಿತಿಗಳು ಬೇಡ. ಬರೆದು ಕಳಿಸುತ್ತೀರಲ್ಲಾ ! ಆ ಮೂಲಕ ನರ್ತನ ಕ್ಷೇತ್ರದ ಕಲಾವಿದರನ್ನು ಮತ್ತಷ್ಟು ಸಮೀಪಿಸೋಣ.**

## ದೀವಟಿಗೆ

# ಬೃಹದೀಶ್ವರನಿಗೆ ಬೃಹನ್ ನಾಟ್ಯ ಯಜ್ಞ

ನೃತ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡವರಿಗೆ ಚಿದಂಬರಂನ ನಟರಾಜ, ತಂಜಾವೂರಿನ ಬೃಹದೀಶ್ವರ ದೇಗುಲಗಳಲ್ಲಿ ನೃತ್ಯಸೇವೆ ನಡೆಸಬೇಕೆಂಬುದು ಜೀವಿತದ ಕನಸು. ಅಂತಹ ಕನಸೊಂದು ಅದ್ಭುತವೆನಿಸುವ ಮಟ್ಟಿಗೆ ನನಸಾದ ಸಂಭ್ರಮ 25 ಸೆಪ್ಟೆಂಬರ್, 2010,

ಅಂದು ತಂಜಾವೂರು ಬೃಹದೀಶ್ವರನಿಗೆ ಭರತನಾಟ್ಯದ ಬೃಹತ್ ಆರಾಧನೆ. ತಮಿಳುನಾಡಿನ ಬೃಹದೀಶ್ವರ ದೇವಸ್ಥಾನಕ್ಕೆ 1000 ವರ್ಷ ತುಂಬಿದ ನೆನಪಿಗಾಗಿ 'ಬೃಹನ್–ನಾಟ್ಯ–ಯಜ್ಞ'. ಅಸೋಸಿಯೇಷನ್ ಆಫ್ ಭರತನಾಟ್ಯಂ ಆರ್ಟಿಸ್ಟ್ ಆಫ್ ಇಂಡಿಯಾ( ಅಭಯ್) ನ ಆಶ್ರಯದಲ್ಲಿ ಡಾ. ಪದ್ಮಾ ಸುಬ್ರಹ್ಮಣ್ಯಂ ಅವರ ನೇತೃತ್ವದಲ್ಲಿ ಹಲವು ಊರು, ದೇಶಗಳಿಂದ ಬಂದಿದ್ದ 1000 ಭರತನಾಟ್ಯ ಗುರು–ಕಲಾವಿದರಿಂದ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ದೂರದರ್ಶನ ಪೊದಿಗೈ ವಾಹಿನಿಯು ನೇರಪ್ರಸಾರ ಮಾಡಿದ್ದ ಈ ಕಾರ್ಯಕ್ರಮವನ್ನು ವೀಕ್ಷಿಸುವುದೇ ಒಂದು ಹಬ್ಬ. ನೆರೆದ ಲಕ್ಷಾಂತರ ಜನರ ಮಧ್ಯೆ ಮುಸ್ಸಂಜೆ ಹೊತ್ತಿಗೆ ಶುಭಾರಂಭ ಹೊಂದಿದ ಕಾರ್ಯಕ್ರಮದ ಒಟ್ಟಾರೆ ಸಂಯೋಜನೆ, ಕೊರಿಯೋಗ್ರಫಿಯನ್ನು ಸ್ವತಃ ಡಾ. ಪದ್ಮಾ ಸುಬ್ರಹ್ಮಣ್ಯಂ ಅವರೇ ಯೋಜಿಸಿದ್ದರು.



ಚೋಳರ ಅರಸ ರಾಜ ರಾಜ ಚೋಳನಿಂದ ಕ್ರಿ.ಶ.1010ನೇ ಇಸವಿಯಲ್ಲಿ ನಿರ್ಮಿತವಾದ ಈ ದೇವಾಲಯಕ್ಕೆ ರಾಜರಾಜೇಶ್ವರನ್ ದೇವಸ್ಥಾನವೆಂಬ ಹೆಸರೂ ಇದ್ದು ; ಇದು ವಿಶ್ವದ ಪ್ರಪ್ರಥಮ ಸಂಪೂರ್ಣ ಅಮೃತಶಿಲಾ ದೇಗುಲವಾಗಿದೆ. ನಂದಿ ಮಂಟಪದಲ್ಲಿ ಅಲಂಕೃತ ಬೃಹತ್ ನಂದಿ ವಿಗ್ರಹದ ಸುತ್ತಲೂ ಆಯೋಜಿಸಲಾಗಿದ್ದ ಈ ಬೃಹನ್‌ನಾಟ್ಯಯಜ್ಞದಲ್ಲಿ ಗಣೇಶ ಕೌತ್ವಂನಿಂದ ಮೊದಲ್ಗೊಂಡು ನಂತರ ಕರೂರು ತಿರುವಿಸೈಯಪ್ಪ ಕಾವ್ಯದಿಂದ ಆಯ್ದ 10 ಸಾಲುಗಳನ್ನು, ಶಂಕರಾಚಾರ್ಯ ವಿರಚಿತ ಶಿವ ಪಂಚಾಕ್ಷರಿ ಮುಂತಾದ ಭಕ್ತಿಪೂರಿತ ನೃತ್ಯ ಬಂಧಗಳನ್ನು ಕಲಾವಿದರು ಏಕಪ್ರಕಾರವಾಗಿ ನರ್ತಿಸಿದರು.

ಎಲ್ಲಾ ಕಲಾವಿದರನ್ನು ಒಗ್ಗೂಡಿಸುವ, ಅರಿವು ಬೆಳೆಸುವ ಮತ್ತು ದೇವಾಲಯಗಳೊಂದಿಗೆ ಉತ್ತಮ ಬಾಂಧವ್ಯ ನಿರೂಪಿಸುವ ದೃಷ್ಟಿ ಈ ಯಜ್ಞದ ಗುರಿ ಎಂಬುದು ಡಾ. ಪದ್ಮಾ ಅವರ ಅನಿಸಿಕೆ. ಈ ಮೂಲಕ ನಾಟ್ಯ ಸೇವೆಯು ಬೃಹದೀಶ್ವರನಿಗೆ ಅರ್ಪಿತವಾದುದು ನಿಜಕ್ಕೂ ದಾಖಲಾರ್ಹ ಮತ್ತು ಪಾಲ್ಗೊಂಡ ಕಲಾವಿದರೆಲ್ಲರಿಗೂ ಅವರ್ಣನೀಯ ಸಂತೋಷವಾಗಿದೆ ಎಂಬುದು ಭಾಗವಹಿಸಿದ ಕಲಾವಿದರ, ಸಂಘಟಕರ ಅಭಿಪ್ರಾಯ. ಈ ಕಾರ್ಯಕ್ರಮದ ಅಂಗವಾಗಿ ಜೂನ್‌ನಿಂದಲೇ ಡಾ. ಪದ್ಮಾ ಅವರ ಮುಂದಾಳತ್ವದಲ್ಲಿ ದೇಶಾದ್ಯಂತ ಹಲವು ನೃತ್ಯ

ಸಂಸ್ಥೆಗಳು ಒಗ್ಗೂಡಿ ವಿವಿಧ ಕಲಾವಿದರಿಗೆ ಜಾತಿ–ಮತ–ಪ್ರದೇಶ–ದೇಶದ ಬೇಧವಿಲ್ಲದೆ ನೃತ್ಯಬಂಧದ ಮಾರ್ಗದರ್ಶನ ನೀಡುತ್ತಾ ಬಂದಿದ್ದು; ಸಿನಿಮಾ ತಾರೆಗಳು, ಎಳೆಯ ಮಕ್ಕಳು, ಹಿರಿಯ ಗುರುಗಳು, ಯುವ ನೃತ್ಯಪಟುಗಳು ಸೇರಿ ಯಾವುದೇ ಹಮ್ಮು ಬಿಮ್ಮಿಲ್ಲದೆ ಭಾಗವಹಿಸಿ ನರ್ತಿಸಿದ್ದು ವಿಶೇಷವೆನಿಸಿತ್ತು. ತಮಿಳುನಾಡು ಸರ್ಕಾರ ಈ ಕಾರ್ಯಕ್ರಮಕ್ಕೆ ಬರುವವರೆಲ್ಲರಿಗೂ ಸೂಕ್ತ ವಸತಿ, ಆಹಾರ ವ್ಯವಸ್ಥೆಯನ್ನು ಆಯೋಜಿಸಿತ್ತಲ್ಲದೆ ; ಸ್ವತಃ ಪಾಲ್ಗೊಂಡು ಧನ್ಯವಾಯಿತು. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮದ ಕುರಿತಂತೆ ಡಿವಿಡಿಯು ಬಿಡುಗಡೆಯಾಗಲಿದೆ.

ಇದನ್ನು ನೋಡಿ ಕರ್ನಾಟಕದ ನೃತ್ಯ ಕಲಾವಿದರು, ಸಂಸ್ಥೆಗಳು, ಅಕಾಡೆಮಿ ಮತ್ತು ಸ್ವತಃ ತಾನೇ ಆಯೋಜನೆ ಮಾಡಿದ ಸಂಗೀತ–ನೃತ್ಯ ಕಾರ್ಯಕ್ರಮಗಳಿಂದ ತಪ್ಪಿಸಿಕೊಳ್ಳುವ ಸರ್ಕಾರ ಸಾಕಷ್ಟು ಕಲಿಯಬೇಕಿದೆ. ಅಲ್ಲವೇ?

## ಅಂಗಳದ ಮಾತು–ತಿಂಗಳ ಚರ್ಚೆ

ನೂಪುರ ಭ್ರಮರಿಯ 4/4ರಲ್ಲಿರುವ ದಿ. ಭಾಗವತ ಕಾಳಿಂಗ ನಾವಡರ ಕುರಿತ ಲೇಖನದ ಬಗೆಗೆ ಒಂದು ಚಿಕ್ಕ ಅಭಿಪ್ರಾಯ. ದಿ. ನಾವಡರು ಶ್ರೇಷ್ಠ ಕಲಾವಿದ, 'ಸ್ಟಾರ್' ಎರಡೂ ಹೌದು. ಆದರೆ–

1. ಏರುಪದ'ಗಳು ನಾವಡರ 'strong area' ಅಲ್ಲ.
2. ಮುಂಬಯಿಯಲ್ಲಿ ಚಿಟ್ಟಾಣಿ–ನಾವಡರು ಪ್ರವೇಶಿಸಿದ ಕಾಲಕ್ಕೆ ಅದು ಯಕ್ಷಗಾನದ ಗಂಧಗಾಳಿ ಇಲ್ಲದಿದ್ದ ಪ್ರವೇಶ ಆಗಿತ್ತೇ? ಸುಮಾರು 1825ರಿಂದಲೇ ಅಲ್ಲಿ ಯಕ್ಷಗಾನವಿತ್ತು. 1940ರ ಬಳಿಕ ಹಲವು ಮೇಳಗಳು, ತಂಡಗಳು ಅಲ್ಲಿ ಪ್ರದರ್ಶನ ನೀಡಿವೆ. ಇರಾ–ಕರ್ನಾಟಕ ತಂಡಗಳ ಮುಂಬೈ ಆಟಗಳು (1960–1980) ದಾಖಲೆ ನಿರ್ಮಿಸಿದವು. ಅನೇಕ ಸ್ಥಳೀಯ ಸಂಘಟನೆಗಳು ಹವ್ಯಾಸಿ–ವ್ಯವಸಾಯಿಗಳನ್ನು ಕಲೆಹಾಕಿ ದಶಕಗಳಿಂದ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದಿವೆ. ಹಾಗಾಗಿ ಅಲ್ಲಿ ಯಕ್ಷಗಾನದ ನೆಲೆ ಬಹಳ ಮೊದಲಿನಿಂದಲೇ ಇತ್ತು. –ಕಲಾಪತ್ರಿಕೆಗಳಲ್ಲಿ ಮಾಹಿತಿ ಆದಷ್ಟೂ ಖಚಿತವಾಗಿ ಸೌಮ್ಯ ಶೈಲಿಯಲ್ಲಿ ಇದ್ದರೆ ಸೂಕ್ತ. ಓರ್ವರ ಕೊಡುಗೆಯನ್ನು ಪ್ರಶಂಸಿಸುವ ಭರದಲ್ಲಿ ತಪ್ಪು ಮಾಹಿತಿ ವಿತರಣೆ ಆಗಬಾರದು ಎಂದು ನನ್ನ ಸೂಚನೆ.

**–ಡಾ. ಪ್ರಭಾಕರ ಜೋಷಿ, ಯಕ್ಷಗಾನದ ಹಿರಿಯ ವಿದ್ವಾಂಸರು, ಮಂಗಳೂರು.**

***


ಪ್ರಿಯ ಓದುಗರೇ,

ಕಳೆದ ಬಾರಿ ನಾನು ಬರೆದ ಅಂಕಣದ ಬಗೆಗೆ ಮಾನ್ಯ ಡಾ.ಪ್ರಭಾಕರ ಜೋಷಿಯವರು ಪ್ರತಿಕ್ರಿಯಿಸಿದ್ದಾರೆ ಹಾಗೂ ಮುಂಬಯಿಯ ಯಕ್ಷಗಾನ ಇತಿಹಾಸದ ಬಗೆಗೆ ಮಾಹಿತಿ ನೀಡಿದ್ದಾರೆ. ನನ್ನಿಂದ ನೀಡಲಾಗಿದ್ದ ತಪ್ಪು ಮಾಹಿತಿಯನ್ನು ಸರಿಪಡಿಸಿದ್ದಕ್ಕೆ ಅವರಿಗೆ ನಾನು ಆಭಾರಿಯಾಗಿದ್ದೇನೆ. ಆದರೆ ನಾನು ನೋಡದ, ಹಿಂದೆ ಆಗಿಹೋದ ಕಲಾವಿದರ ಬಗೆಗೆ ಇನ್ನಾರಲ್ಲೋ ಕೇಳಿ ಬರೆಯುವ ಸಂದರ್ಭದಲ್ಲಿ ಎಲ್ಲೋ ಮಾಹಿತಿಯ ಕೊರತೆ ಅಥವ ತಪ್ಪು ಮಾಹಿತಿಯಿಂದ ಆ ರೀತಿ ಬರೆಯುವ ಹಾಗಾಯಿತೆಂದು ತಿಳಿಸಬಯಸುತ್ತೇನೆ.

ಹಾಗೆಯೇ ಡಾ.ಜೋಷಿಯವರು ಅಂಕಣಕ್ಕೆ ಪ್ರತಿಕ್ರಿಯಿಸುತ್ತಾ, 'ಏರುಪದಗಳು ನಾವಡರ ಸ್ಟ್ರಾಂಗ್ ಏರಿಯಾ ಅಲ್ಲ' ಎಂದೂ ಸೇರಿಸಿದ್ದಾರೆ. ಆದರೆ ನಾನು ಹೇಳಿರುವುದು 'ಕರ್ಣಕಠೋರವಾದ ಏರುಪದ್ಯಕ್ಕೂ ಒಂದು ಇಂಪನ್ನು ಕೊಟ್ಟವರು ನಾವಡರು' ಎಂದು ಮಾತ್ರ. ಅದು ಅವರ ಸ್ಟ್ರಾಂಗ್ ಅಥವ ವೀಕ್ ಏರಿಯ ಆಗಿತ್ತೇ ಎಂಬುದರ ಬಗೆಗೆ ನಾನು ಉಲ್ಲೇಖಿಸಿಲ್ಲ. ಒಂದೊಮ್ಮೆ ನನ್ನ ಆ ವಾಕ್ಯಕ್ಕೂ ಹಿರಿಯರಾದ ಜೋಷಿಯವರು ಆಕ್ಷೇಪಿಸುವುದಾದರೆ 'ಸರ್, ಅದು ನಿಮ್ಮ ಅಭಿಪ್ರಾಯ' ಎಂದಷ್ಟೇ ವಿನಯಪೂರ್ವಕವಾಗಿ ಹೇಳಬಲ್ಲೆ. ಯಾಕೆಂದರೆ ಕ್ಯಾಸೆಟ್‌ನಲ್ಲಾದರೂ ನಾವಡರನ್ನು ಸಾಕಷ್ಟು ಕೇಳಿದ ನನಗೆ ಅವರ ಏರುಪದಗಳು ವಿಶೇಷವಾಗೇನೂ ಇರಲಿಲ್ಲ ಅನ್ನುವುದನ್ನು ಒಪ್ಪುವುದಕ್ಕೆ ಕಷ್ಟವಾಗುತ್ತಿದೆ.

ಏನೇ ಇರಲಿ. ಯಕ್ಷಗಾನದಲ್ಲಿ ಸಾಕಷ್ಟು ಮಾಗಿದ, ನಾನೂ ಸೇರಿದಂತೆ ಅಸಂಖ್ಯ ಮಂದಿ ಅಭಿಮಾನಪಡುವ ಡಾ.ಜೋಷಿಯವರು ನನ್ನ ಬರಹಕ್ಕೆ ಪ್ರತಿಕ್ರಿಯಿಸಿದ್ದು ನನಗಂತೂ ಬರೋಬ್ಬರಿ ಖುಷಿಕೊಟ್ಟಿದೆ. ಹಾಗೆಯೇ ನನ್ನ ಜವಾಬ್ದಾರಿಯನ್ನೂ ಹೆಚ್ಚಿಸಿದೆ ಎಂದು ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ.

**– ರಾಕೇಶ್ ಕುಮಾರ್ ಕಮ್ಮಜೆ, ಪುತ್ತೂರು.**



# ನರ್ತನ ಸುರಭಿ

## ನೃತ್ಯ : ಅಂದು, ಇಂದು, ಮುಂದು

* ನಾಟ್ಯಾಚಾರ್ಯ ಕೆ. ಮುರಲೀಧರ ರಾವ್

ಒಂದು ಪ್ರದರ್ಶನ ಕಾಲದ ಸಂದಿಗ್ಧ ಸನ್ನಿವೇಶದಲ್ಲಿ ಏಕವ್ಯಕ್ತಿಯಿಂದ ನಡೆವ ಕ್ರಿಯೆಯಲ್ಲಿ ಜಾಗರೂಕ ಪ್ರಜ್ಞೆ ಮುಖ್ಯವಾಗಿದೆ. ಕಲಾಗಾರನಿಗೂ ಅವನಿದಿರು ಕುಳಿತ ಪ್ರೇಕ್ಷಕನಿಗೂ ಇರುವ ಬಾಂಧವ್ಯದಲ್ಲಿ, ಅವನ ವಿಚಾರದಲ್ಲೇ ಆಗಲಿ ಅಥವ ಕಲೆಯ ವಿಚಾರದಲ್ಲೇ ಆಗಲಿ ಒಂದು ತರದ ಅವಿನಾಭಾವ ಸಂಬಂಧ ಏರ್ಪಡುತ್ತದೆ. ಉದಾ : ಒಬ್ಬ ಕೋಲೆಗಡುಕನು ಕೆಲಬಾರಿ ಜೀವನದ ಸಿಹಿ ಅನುಭವವನ್ನು ಮನಸ್ಸಿಗೆ ತಂದು ತೃಪ್ತಿಪಡುತ್ತಾನೆ. ಕಾರಣ– ಇಂತಹ ಯೋಚನೆಗಳು ಅವನ ಮನಸ್ಸಿಗೆ ಬಂದಾಗ ಸ್ವಲ್ಪ ಮಟ್ಟಿಗೆ ಆತನನ್ನು ನಗುವಿನಲ್ಲಿ ಹೊಸ ರೂಪ ಕೊಟ್ಟಿರಲೂಬಹುದು. ಆದರೆ ಕಲಾವಿದನು ದೂರದಲ್ಲಿದ್ದರೆ ಪರಸ್ಪರ ದೃಷ್ಟಿಗೆ ಆ ತರದ ಕೂಡುವಿಕೆ ಕಳಚಿ ಹೋಗುತ್ತದೆ. ಕಲಾಗಾರನ ಮುಖದ ಮೇಲಿನ ಭಾವನೆಯಾಗಲೀ, ಅವುಗಳ ಬದಲಾವಣೆಯಾಗಲೀ ಕಣ್ಣಿಗೆ ಕಾಣಿಸದಷ್ಟು ದೂರವಿದ್ದರಂತೂ ಇನ್ನೂ ಕಷ್ಟ. ಅದೂ ಸಾಲದೆ ತೆಲುಗು ಅಥವಾ ತಮಿಳು ಭಾಷೆಯ ಸಂಪೂರ್ಣ ಅರಿವು ಪ್ರೇಕ್ಷಕನಿಗೆ ಇರುವುದು ಕಡಿಮೆ.

ನಮ್ಮಲ್ಲಿ ಪದವರ್ಣಗಳು, ಪದಾಭಿನಯಗಳು, ಕೆಲಬಾರಿ ಜಾವಳಿಗಳೂ ಇವೆ. ಜಾವಳಿಗಳಾದರೋ ಕನ್ನಡದಲ್ಲಿ ಕೆಲವಿವೆ. ಉಳಿದುದನ್ನು ಅರ್ಥ ತಿಳಿದು ಅಭಿನಯಿಸುವವರು ಕಡಿಮೆ. ತೆಲುಗು ಅಥವಾ ತಮಿಳು ವರ್ಣಗಳಿಗೆ ತೀರಾ ಸಾಮಾನ್ಯವಾದ ಸನ್ನಿವೇಶಗಳನ್ನು ನೀಡಿ ತೃಪ್ತಿ ಹೊಂದುವವರಿದ್ದಾರೆ. ಕೆಲವೊಮ್ಮೆ ತಾವು ಹಿಂದೆ ಮಾಡಿದ ಅಥವಾ ಇತರರು ಮಾಡಿದ ಅನುಭವ ಅಥವಾ ಪ್ರತಿಕೃತಿಯನ್ನು ಸೇರಿಸಿ ಮುಗಿಸುತ್ತಾರೆ. ಪದವರ್ಣ ಹಾಗೂ ಪದಾಭಿನಯಗಳೂ ನಮ್ಮಲ್ಲಿ ಅತ್ಯಲ್ಪ. ಇಂದಿಗೂ ನಮ್ಮ ನಡುವಿನಲ್ಲಿ ವರ್ಣ ಅಥವಾ ಅಭಿನಯಗಳಿಗೆ ಸಂಗೀತ ಹಾಗೂ ನಾಟ್ಯಸಂಬಂಧಿಯಾದ ಕೃತಿ ರಚಿಸುವವರು ಬಹಳ ಕಡಿಮೆ.

ಸಾಧಾರಣವಾಗಿ ರಂಗಸ್ಥಳದಲ್ಲಿ ನಾಟ್ಯವು ಹೇಳಿ ತಿಳಿಸುವುದು– ಒಂದು ಗಂಡು ಹೆಣ್ಣಿನ ಅಂತರ್ಭಾವವನ್ನು. ಭರತನಾಟ್ಯದ ನಾಯಿಕಾ ಒಂದು ನಿರಾಡಂಬರದ ಲಾಲಿತ್ಯ ಲಾವಣ್ಯದಿಂದ ಕೂಡಿರುವವಳು. ತನ್ನ ಮನದಿಚ್ಛಿಸಿದ ವರನಿಗಾಗಿ ತನ್ನನ್ನೂ ಅಲಂಕಾರಗೊಳಿಸುವವಳು ; ಅವಳ ಮನಸಿನಲ್ಲೆದ್ದ ಭಾವನೆಗಳು ಹಲವಾರು ರೀತಿಗಳಲ್ಲಿದೆ; ಅವನನ್ನು ಕಾಣಲು ಹೋಗುವಳು; ಮನ್ಮಥನ ಬಾಣಗಳಿಂದಾಗುವ ಮನಸ್ಸಿನ ನೋವು, ಸಂಕಟ, ಆತ ಇನ್ನೊಂದು ಸ್ತ್ರೀಯಲ್ಲಿ ಅನುರಕ್ತನಾದಾಗ ಅವಳಿಗಾಗುವ ಕಸಿವಿಸಿ ; ನಾಯಕನು ಪುನಃ ಮನೆಗೆ ಬಂದಾಗ ಖಂಡಿಸಿ ಮಾತನಾಡಿ, ಕೊನೆಗೆ ಅದಕ್ಕಾಗಿ ಕೊರಗಿ, ಅವನನ್ನೂ ಒಲಿಸಿ ತಾನೂ ಒಲಿದು ತೃಪ್ತಿ–ಸಮಾಧಾನಗೊಳ್ಳುವವಳು.

ಆದರೆ ಇಂದು, ನರ್ತಕಿಯರು ತಾಳಾವರ್ತವನ್ನು ಹೊಂದಲಾರದೆ ಕಷ್ಟಪಡುತ್ತಿದ್ದರೂ, ನಾಟ್ಯದ ಇತರ ಭಾವಗಳಲ್ಲಿ ತಾವು ಮೆರೆಯದಿದ್ದರೂ ನಾಲ್ಕು ಜನರು ತಮ್ಮ ನಡೆಯನ್ನು ಕಂಡು ಸಂತೋಷ ಪಡುತ್ತಿದ್ದಾರಲ್ಲ ಎಂಬ ಹುಮ್ಮಸ್ಸು ಸೇರಿದಾಗ ಬರಿಯ ಆಂಗಿಕದ ಜತಿ ನಿರೂಪಣೆಯಲ್ಲೇ ನಮ್ಮ ಕಲೆ ಮುಂದುವರಿಯುತ್ತದೆ. ಈ ರೀತಿ ಭರತನಾಟ್ಯ ಮೆರೆಯಬೇಕೇ? ನೃತ್ಯವೆಂದರೆ ಬರಿಯ ಹಾರುವಿಕೆ ಮತ್ತು ಅಂಗಗಳ ನಡೆಗಳಲ್ಲಿಯೇ ನೃತ್ಯ ಪ್ರದರ್ಶನ ಮುಗಿಯಬೇಕೇ?

ನೋಡುತ್ತೇವೆ–ಹಾಲ್‌ನಲ್ಲೂ ಜನ ತುಂಬಿದ್ದಾರೆ. ನೃತ್ಯ ನೋಡಲು ಬಂದ ಅನೇಕರಿಗೆ ಅಲ್ಲಿ ಕುಳಿತಿರಲೂ ಜಾಗವಿಲ್ಲ. ಆದರೂ ನಿಂತು ನೋಡುತ್ತಾರೆ. ಪ್ರಥಮ ಬಾರಿಗೆ ಬಾಲಕಿ ರಂಗದ ಮೇಲೆ ಬಂದಿದ್ದಾರೆ. ಎರಡು

ನಿಮಿಷಗಳಲ್ಲಿ ನಮ್ಮ ಕಣ್ಣು ತೆರೆದಿದೆ. ಆದರೆ ಅಲ್ಲಿ ಕಾಣುತ್ತಿದ್ದದ್ದು ಭರತನಾಟ್ಯದ ಮಹತ್ತರ ಸೋಲನ್ನು. ಕಾರಣ, ಮೊದಲಿನಿಂದ ಕೊನೆಯ ವರೆಗೂ ಆ ಬಾಲಕಿ ಮಾಡಿದ್ದದು ಡೊಂಬರಾಟವನ್ನು ಮಾತ್ರ !

ಸ್ಟೇಜಿನ ಮೇಲೆ ಕುಳಿತಿದ್ದಾರೆ– ದೊಡ್ಡ ವ್ಯಕ್ತಿಗಳು. ಕಾಣಿಸಿದ್ದು ಕೆಟ್ಟದಾದರೂ ಮುಖದಲ್ಲಿ ಮುಗುಳುನಗೆಯಿಂದ, ಬಾಯಿಮಾತಿನಿಂದ ಇಂಥ ಗೌರವಯುತ ಸಭೆಗೆ ತಾವು ಬಂದದ್ದು ನಮ್ಮ ಪುಣ್ಯ ಎಂದು ತಮ್ಮ ಮಾನ ಹಾಗೂ ಪ್ರದರ್ಶನದ ಯೋಗ್ಯತೆಯನ್ನು ಮುಚ್ಚಿಡುತ್ತಾರೆ. ದೊಡ್ಡ ಮನುಷ್ಯರೂ ಹೊಗಳಿ ಹೊಗಳಿ ತೆರೆಮರೆಗೆ ಹೋಗುತ್ತಾರೆ. ಗುರುಗಳ ಮನ್ನಣೆ ಇತ್ಯಾದಿ ನಿರಾತಂಕವಾಗಿ ನಡೆಯುತ್ತದೆ. ಫೋಟೋಗ್ರಾಫರ್ ಕೆಲಬಾರಿ ನಮ್ಮ ದೃಷ್ಟಿಯ ಮುಂದೆ ಕ್ಲಿಕ್ಕಿಸುತ್ತಾರೆ. ನಾವು ಕಾಣುವುದು ಅವರ ನರ್ತನಲೀಲೆಯನ್ನು ಎನ್ನುವಂತೆ ಕೆಲವು ವಿಮರ್ಶೆ ಬರೆದುಕೊಳ್ಳುತ್ತಾರೆ.

ಅಂದಿನ ಕಾಲಕ್ಕೆ ಗುರುಗಳೆನಿಸಿಕೊಂಡರೂ ತಾವು ನರ್ತಿಸದಿದ್ದರೂ ವಿದ್ಯಾರ್ಥಿಗಳಿಗೆ ವಿಷಯವನ್ನು ಬುಡಸಮೇತ ಹೇಳಿಕೊಡುತ್ತಿದ್ದರು. ತಮ್ಮಿದಿರು ಬೇರೆ ವಿದ್ಯಾರ್ಥಿಯನ್ನು ಕರೆಸಿ ಅವರಿಂದ ಮಾಡಿಸಿದರೂ ವಿದ್ಯಾಥಿಯ ರೂಪಕ್ಕೆ, ದೇಹಕ್ಕೆ, ವಯಸ್ಸಿಗೆ ತಕ್ಕಂತೆ ಹೊಂದುವ ಬಗೆಯಿತ್ತು. ಆದರೆ ಇಂದು ತಮ್ಮ ಗುರುಗಳಂತೆ, ಉತ್ತಮ ನಾಟ್ಯಪ್ರಕಾರದ ಬದಲಿಗೆ ಹಾಸ್ಯಾಸ್ಪದ ವ್ಯಕ್ತಿಗಳಾಗಿ ನರ್ತಿಸುವವರು ಕಾಣಿಸುತ್ತಾರೆ. ನಟುವಾನ್ನಾರ್‌ಗಳಿಂದ ಕಲಿತು ಲಾಭ ಪಡೆದವರು ಇಂದು ಇದಿರಿಗೆ ನೆಲದ ಮೇಲೆ ಚಾಪೆ ಹಾಕಿ ಕುಳಿತಿದ್ದಾರೆ. ದುಡ್ಡು ಮುಂದಕ್ಕೆ ಬಾರದೇ ಹೋದೀತು–ಎಂಬ ಭಯದಲ್ಲಿ ಶಿಕ್ಷಕರು ಆದಷ್ಟು ಬೇಗ ಮಕ್ಕಳಿಗೆ ನಾಲ್ಕು ಹೆಜ್ಜೆ ಕಲಿಸಿಕೊಡುತ್ತಾರೆ. ಹೊಸ ಡ್ರೆಸ್ಸು, ಉತ್ತಮ ಗುರುಗಳು–ಕಲಾವಿದರು, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ಸಮ್ಮುಖದಲ್ಲಿ ತಾವು ನರ್ತನವಾಡುವ ಸುಯೋಗವನ್ನು ಬಿಡುವ ಮಕ್ಕಳು ಇದ್ದಾರೆಯೇ? ಏನೆಲ್ಲ ಕಲಿಸಿದರು ಎಂಬ ಪ್ರಶ್ನೆಯಿಲ್ಲ. ಜೊತೆಗೆ ಅವರಲ್ಲೂ ಸೌಂದರ್ಯವೇನೆಂಬ ಅರಿವು ಇರಲಾರದು. ಆದರೆ ಗುರುಗಳು ಹೇಳಿದ ಮೇಲೇನು? ಕಂಡಂತೆ ಮಾಡುವುದು, ಹೇಳಿದಂತೆ ಕುಣಿಯುವುದು–ಇವೆಲ್ಲಾ ಅವರ ಜೀವನವನ್ನು ಬೆಳಗಿಸುವ ಅಂಶಗಳಾಗಿವೆ !

ಸೃಷ್ಟ್ಯಾತ್ಮಕ ವ್ಯಕ್ತಿಗಳಾಗುವ ಮೊದಲೇ ನಮ್ಮ ಶಿಕ್ಷಕರು ಹೊಸ ಬಗೆ ಬೇಕು ಎಂಬ ಉದ್ಗಾರ ತೆಗೆಯುತ್ತಿರುವುದರಿಂದಲೇ ನಮ್ಮ ಜನರಲ್ಲಿ ಒಂದು ಮಾರಾಟದ ಸ್ಥಿತಿ ಕಾಣಿಸುತ್ತಿದೆ ! ಹಾಗಂತ ಅವರು ಹೇಳುವುದು ಅಲ್ಲವೆಂದಲ್ಲ. ಪ್ರತಿಯೊಂದು ಬಾರಿ ತಾವು ನರ್ತಿಸುತ್ತಿದುದ್ದನ್ನೇ ಬದಲಾಯಿಸದಿದ್ದರೆ, ಅದು ಸತ್ತ್ವವನ್ನೇ ಕಳಕೊಂಡಿದೆ ಎಂಬ ಸ್ಥಿತಿ ಇಂದಿನದು.

ಕಲೆಯಲ್ಲಿ ಸ್ವತಂತ್ರಕಲ್ಪನಾ ಶಕ್ತಿ ಬಾರದಿರಲು ಕಾರಣ–ಬಹುಪಾಲು ಕಲಾವಿದರೆನಿಸಿಕೊಂಡವರಿಗೆ ಸಂಗೀತದ ಲಕ್ಷಣಗಳೇ ತಿಳಿಯದಿರುವುದು. ಸಂಗೀತ ಜ್ಞಾನ ಜತೆಗಿದ್ದರೆ ನರ್ತಕಿಯು ತನ್ನ ಅಭಿನಯದ ಕೈಕಾಲು ನಡೆಗಳನ್ನು ಒಂದು ಸುಲಲಿತಸ್ಥಿತಿಗೆ ತರುವುದಲ್ಲದೆ; ಸಾಗರದ ತರಂಗೋಪಾದಿಯ ಸ್ಪರ್ಶ ಸುಖವನ್ನು ನೀಡುತ್ತದೆ. ಸಂಗೀತದ ಜತೆ ಚಲಿಸುವಾಗ ನರ್ತಕಿಯ ಕಾಲು ಅನುರಣಿಸುತ್ತದೆ. ಇಂಥ ವಸ್ತುಗಳು ಸರಿಯಿದ್ದರೆ ನಮ್ಮ ನರ್ತನವನ್ನು ಯಾರೂ ಮರೆಯುವುದಿಲ್ಲ. ಆದರೆ ಇಂದಿಗೂ ಬಹಳಷ್ಟು ಕಲಾವಿದರು (?) ನೃತ್ಯಕ್ಕೆ ಅಗತ್ಯವಿರುವ ಹಾಡುಗಳನ್ನು ಬಾಯಿಪಾಠ ಮಾಡುವುದಲ್ಲದೆ, ಸಂಗೀತದ ಒಳಹೋಗುವ ಸಾಹಸವೇ ಅವರಲ್ಲಿಲ್ಲ ; ಅದಕ್ಕೆ ತಗಲುವ ಕಾಲವೂ ಜೊತೆಗಿಲ್ಲ. ಸಂಗೀತದ ತಾಳಲಯಗಳಲ್ಲಿ ಅಮೂಲ್ಯ ಹೃದಯಸ್ಪರ್ಶಿ ಸ್ವರಗುಣ ಹಾಗೂ ಆಯಾ ರಾಗಕ್ಕೆ ಭಾವವನ್ನು ಒದಗಿಸುವ ಕ್ಲಪ್ತ ಸಾಮರ್ಥ್ಯವೆಲ್ಲವೂ ಇದೆ ಮತ್ತು ಈ ರೀತಿಯ ಮನೋಲ್ಲಾಸವು ನಮ್ಮಲ್ಲಿ ಭಾವನೆಗಳನ್ನು ಹೊಡೆದೆಬ್ಬಿಸುತ್ತದೆ, ಅಭಿನಯಕ್ಕೆ ಸಲುವ ಸೂಕ್ಷ್ಮತೆ ಇದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಿಲ್ಲ. ಹಾಡುಗಳ ತಿಳಿವಳಿಕೆ ಮತ್ತು ಕಾವ್ಯಗಳ ನೆರವು, ಪ್ರತಿಮಾಶಿಲ್ಪ, ಸ್ಥಳ ಪುರಾಣಗಳೆಲ್ಲವೂ ಈ ಕಲೆಗೆ ನೆರವು ನೀಡುತ್ತದೆ ಎಂಬ ಅರಿವು ಮೊದಲೇ ಇಲ್ಲ !

❇

# ಲಲಿತ ಲಹರಿ

## ಸೀತೆಯ ಸ್ವಗತ ಅಥವಾ ಮತ್ತೆ ಹುತ್ತುಗಟ್ಟಿತೆ ಸೀತೆಯ ಚಿತ್ತ?

ಪರಿಕಲ್ಪನೆ ಸಾಹಿತ್ಯ :
**ಪ್ರೊ|| ಉದ್ಯಾವರ ಮಾಧವ ಆಚಾರ್ಯ**

ಸಂಗೀತ, ನೃತ್ಯಸಂಯೋಜನೆ ಮತ್ತು ಪ್ರಸ್ತುತಿ :
**ಶ್ರೀಮತಿ ಭ್ರಮರಿ ಶಿವಪ್ರಕಾಶ್, ಯುಎಸ್ಎ**

**ವಾ**ಲ್ಮೀಕಿಯ ಆಶ್ರಮದಲ್ಲಿ ಕುಶ–ಲವರ ಜನ್ಮದ ಪೂರ್ವದಲ್ಲಿ ರಾಮನಾಣತಿಯಂತೆ ತಮ್ಮ ಲಕ್ಷಣ ಕರೆತಂದು ತೊರೆದಾಗ ಕವಿ ಮನಸ್ಸಿನ ಮುನಿ ವಾಲ್ಮೀಕಿಯಿಂದ ಆಶ್ರಯ ಪಡೆದ ಗರ್ಭಿಣಿ ಸೀತೆಯ ಮನದ ಲಹರಿಯನ್ನು ಕಲ್ಪನಾತ್ಮಕವಾಗಿ ಚಿತ್ರಿಸಲಾಗಿದೆ. ಇದೊಂದು ಮೆಲುಕು. ಇದೊಂದು ಸ್ವಗತ. ಅಳಲಿನ ಆಕ್ರಂದನ. ಯಾರು ಸರಿಯೋ, ಯಾರದು ತಪ್ಪೋ ಎಂಬ ತೀರ್ಮಾನವಿಲ್ಲ. ಕೇವಲ ಪೌರಾಣಿಕ ಸ್ಥಿತಿಯ ಬಗೆಗೆ ಒಂದು ಸ್ಪಂದನ. ಪುರಾಣ ಶಿಲ್ಪದ ಮೌಲ್ಯಕ್ಕೆ ಧಕ್ಕೆ ತಾರದೆ ಮಾನವೀಯ ನೆಲೆಯಲ್ಲಿ ವಿಶ್ಲೇಷಣೆ ನಡೆದಿದೆ. ಮಣ್ಣು, ಕಾಡು, ಏಕಾಕಿತನ, ಹೆಣ್ತನದ ಅವಸ್ಥಾಂತರಗಳೆಲ್ಲ ಸೀತೆಯ ಬಾಳಿನಲ್ಲಿ ಹಾದುಹೋದುದರ ಒಂದು ಅವಲೋಕನ. ಮನೋಧರ್ಮದ ನೆಲೆಯಲ್ಲಿ ರಾಮಾಯಣದ ಕೆಲವು ಚಿತ್ರಣಗಳನ್ನು ನೃತ್ಯ ಭಾಷೆಯಾಗಿಸುವ ಪ್ರಯತ್ನ.

☆☆☆☆

ಉಡುಪಿಯಲ್ಲಿ ನೆಲೆಸಿರುವ ಕವಿ, ವಿದ್ವಾಂಸ ಶ್ರೀ ಉದ್ಯಾವರ ಮಾಧವ ಆಚಾರ್ಯರ ಲೇಖನಿಯಿಂದ ಹೊರಬಂದ ರೂಪಕವಿದು. ಈಗಾಗಲೇ ವಸುಂಧರಾ ದೊರೈಸ್ವಾಮಿ ಅವರಿಗೆ ಹಲವು ಏಕವ್ಯಕ್ತಿ ರೂಪಕಗಳನ್ನು ನೀಡಿದ ಹೆಮ್ಮೆ ಇವರದ್ದು.


ಮಾಧವ ಆಚಾರ್ಯರ ಪುತ್ರಿ ಯುಎಸ್ಎಯಲ್ಲಿ ನೆಲೆಸಿರುವ ಭ್ರಮರಿ ಶಿವಪ್ರಕಾಶ್ ತಂಡದವರಿಂದ ಮೊದಲ ಪ್ರದರ್ಶನ: ಎಪ್ರಿಲ್ 17, 2010 ಅಮೇರಿಕಾ ಸಂಸ್ಥಾನದ ನ್ಯೂ ಜೆರ್ಸಿ ರಾಜ್ಯದ ತ್ರಿವೇಣಿ ಕನ್ನಡ ಸಾಂಸ್ಕೃತಿಕ ವೇದಿಕೆಯ ಯುಗಾದಿ ಆಚರಣೆಯಲ್ಲಿ. 2ನೇ ಪ್ರದರ್ಶನ ನ್ಯೂಜೆರ್ಸಿಯ ಬ್ರಿಡ್ಜ್‌ವಾಟರ್‌ನಲ್ಲಿ ನಡೆದ ವಾರ್ಷಿಕ ಕಾರ್ಯಕ್ರಮ ನಾದನೃತ್ಯ ದಿವಸ ಜುಲೈ 31, 2010ರಂದು. 3ನೇ ಪ್ರದರ್ಶನ ಆಗಸ್ಟ್ 22, 2010ರಂದು ಪ್ರಾವಿಡೆನ್ಸ್, ರೋಡ್ ಐಲ್ಯಾಂಡಿನ ಪೆರಿಶೇಬಲ್ ಥಿಯೇಟರ್‌ನಲ್ಲಿ ನೃತ್ಯಾಸಕ್ತರ ಸಮಕ್ಷಮ.]

☆☆☆☆

[ಸೀತೆಯ ಪ್ರವೇಶ]

ಮಹಾಕಾವ್ಯದೊಳಗೊಂದು ಮನಸ್ಸಿದೆ. ಆ ಮನಸ್ಸಿನಾಳದಲ್ಲೊಂದಷ್ಟು ಪ್ರಶ್ನೆಗಳು ಮಡುಗಟ್ಟಿವೆ. ಹುತ್ತದಿಂದ ಹೊರಗೆ ಬಂದು ಒಳಗಿನ ಧ್ವನಿಗೆ ಜೀವಕೊಟ್ಟ ಕವಿ ವಾಲ್ಮೀಕಿಯಲ್ಲದೆ ಕಾವ್ಯದ ನಾಯಕಿಗೆ ಇನ್ಯಾರು ಸಾಂತ್ವನ ಹೇಳಿಯಾರು? ಸೀತೆಯ ಸ್ವಗತದೊಳಗೆಲ್ಲ ಆ ಸಾಂತ್ವನವೇ ಹಾಡಾಗಿದೆಯೇ. . . . . (ಹಮ್ಮಿಂಗ್) ಅಣ್ಣ ರಾಮನಾಜ್ಞೆಯಂತೆ ತಮ್ಮ ಲಕ್ಷ್ಮಣ ಭೂಜಾತೆಯನ್ನು ವಲ್ಮೀಕಗಳ ನಡುವೆ ರಥದಿಂದಿಳಿಸಿ ಮರಳಿದಾಗ ಬಸುರಿ ಸೀತೆಗಾಯಿತು ವಾಲ್ಮೀಕಿಯಾಶ್ರಮವೇ ಆಶ್ರಯ. . .

[ರಂಗದ ಒಂದು ಬದಿಯಿಂದ ದೂರದೂರ ಸಾಗುತ್ತಿರುವ ಲಕ್ಷ್ಮಣನನ್ನೇ ಮರೆಯಾಗುವವರೆಗೆ ಕಾಣುತ್ತ ಹಿಮ್ಮುಖವಾಗಿ ಸೀತಾ ಮಾತೆ ರಂಗದ ನಡುವಿಗೆ ಬರುತ್ತಿದ್ದಂತೆ ಮೇಲಿನ ಮಾತುಗಳು ಹಿನ್ನೆಲೆಯಿಂದ ಮೂಡಿಬಂದು, ರಂಗದ ನಡುವೆ ಆಘಾತಗೊಂಡಂತೆ ಪರಿತ್ಯಕ್ತೆ ಸೀತೆ ನಿಂತಾಗ ನಿಧಾನವಾಗಿ ಮೂರು ಸ್ತರಗಳಲ್ಲಿ 'ಕುಹೂ' ಕುಕಿಲು ಕೇಳಿಬರುತ್ತದೆ.]



ಕುಹೂ . . . . ಕುಹೂ. . . . ಕುಹೂ. . .

[ತುಸು ಮೌನ – ನಂತರ ಶ್ಲೋಕ]

ರಾಗ : ತಿಲ್ಲಂಗ್, ರೂಪಕ ತಾಳ

ಹಾಡು : ಕೂಜಂತಂ ವಾಲ್ಮೀಕಿ ಕೋಕಿಲಂ॥
ಹುತ್ತದಿಂದ ಹೊರಗೆ ಬಂದು ಕವಿಯ ಚಿತ್ತ ಪಡೆದವನೆ।
ಕೇಳು ನನ್ನ ಕಥೆಯ। ಹಾ. . .ಡು ನನ್ನ ವ್ಯಥೆಯ।
ಆಲಿಸುತ್ತ ಆ ಹಾಡ। ಕಳೆವೆ ಬಾಳ ಪಥವ ॥

[ಸೀತೆ ದಿಣ್ಣೆಯ ಮೇಲೆ ಕುಸಿಯುತ್ತಿದ್ದಂತೆ ಅಲೆಅಲೆಯಾಗಿ ರಾಮನಾಮದ ನಾದ]

ರಾಮ ರಾಮ . . . ರಾಮ ರಾಮ . . . ರಾಮ ರಾಮ . . . ರಾಮ ರಾಮ . . .

[ಸೀತೆ ರಂಗದ ಸುತ್ತೆಲ್ಲ ಹರಿದಾಡಿ ಆ ನಾದದಲೆಯನ್ನು ಕೇಳುತ್ತ ನೋವು ನಲಿವಿನ ಭಾವ ವ್ಯಕ್ತ ಪಡಿಸುತ್ತಾಳೆ]

☆☆☆☆

ರಾಗ : ಹಂಸಾನಂದಿ

ಹಾಡು : ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ।
ಆರುಹ್ಯ ಕವಿತಾ ಶಾಖಾಂ ವಂದೇ ವಾಲ್ಮೀಕಿ ಕೋಕಿಲಂ . . . ॥

ಮಾತು: ಪರಿತ್ಯಕ್ತೆ ಈ ಮಾತೆಗೆ ದಾರ್ಶನಿಕ ಕವಿಯಾಶ್ರಮದ ಕಾನನವೇ ಕನಸು ಕಾಣುವ ತಾಣವಾಗುತ್ತಿದೆಯೇ. . . . [ಸೂಕ್ತ ಅಭಿನಯ]

☆☆☆☆

ರಾಗ : ಹಂಸಾನಂದಿ, ಆದಿತಾಳ



ಹಾಡು : ಆಲಿಸಿದಳು ಸೀತೆ। ಮಾತೆ ॥
ಮಾತಿಲ್ಲದೆ ಆಲಿಸಿದಳೆ । ಸೀತೆ॥
ವಾಲ್ಮೀಕಿ ಕೋಗಿಲೆ ವನದಾಳದಲ್ಲಿ।
ಉಲಿದ ರಾಮನ ನಾಮವ। ಆಲಿಸಿದಳು ಸೀತೆ । ಮಾತೆ॥

ಕವಿ ಮನದ ಮೌನದಲಿ ಚಿತ್ತ ಹುತ್ತದ ಪದರಿನಲಿ।
ಮೂಡಿ ಮಡುಗಟ್ಟಿರುವ ॥
ಮಧುಮಧುರ ಮಧುರಾಕ್ಷರವ। ಆಲಿಸಿದಳೆ ಸೀತೆ। ಮಾತೆ॥

ಮಾತು: ಆಲಿಸುವುದಲ್ಲದೆ ಇನ್ನೇನುಳಿದಿದೆ ಈ ಮೈಥಿಲಿಯ ಬಾಳಿನಲ್ಲಿ [ ರಾಮ ರಾಮ ಮಂದ್ರವಾಗಿ]ಈ ರಾಮ ನಾಮ ಈಗ ಆಧಾರ ಶ್ರುತಿ ಮಾತ್ರವೇ? ಎದೆಯೊಳಗೆ ಬೆಳಕಾಗಿ ತುಂಬಿದೆ ರಾಮನಾಮದ ಹಾಡು. ಹೊರಗೆಲ್ಲ ಕತ್ತಲಾಗಿ ಕಾಡುತ್ತಿದೆ ಕಾಡು. ಚಿತ್ರಕೂಟ, ದಂಡಕಾರಣ್ಯ, ಅಶೋಕವನ. . . ಮತ್ತೆ ಈಗ ವಲ್ಮೀಕಗಳ ಸುತ್ತಿರುವ ಕಾಡು. [ಒಂದು ಹಿಡಿ ಮಣ್ಣನ್ನೆತ್ತಿ ಆಘ್ರಾಣಿಸಿ. . ]ಹಿಡಿ ಮಣ್ಣಿನಿಂದ ಮೂಡಿಬಂದೆ ನಾನು ಭೂಜಾತೆ. . .ಹಿಡಿ ಹಿಡಿ ಮಣ್ಣು ಹುತ್ತವಾಗಿ ಅದರಾಳದಿಂದ ಮೂಡಿ ಬಂತು ನನ್ನ ಕವಿತೆ. . . ಈಗ ಮತ್ತೆ ಆ ಹುತ್ತದೊಳಗೇ ನಾನಾಗಬೇಕೇ ಭೂಗತೆ? ಎಲ್ಲ ಎಲ್ಲ ನೆನಪುಗಳು. . .



☆☆☆☆

[ಸೀತೆಯ ಬಾಳಿನ ಹಿನ್ನೋಟ]

ರಾಗ : ಹಿಂದೋಳ, ಖಂಡಛಾಪು ತಾಳ

ಹಾಡು : ಮಿಥಿಲೆಯ ಮಣ್ಣು ಮಗುವಾಗಿ ನಗುವಾಗಿ।
ಮುಗುಳಾಗಿ ಮಗಳಾಗಿ ಹಗುರಾಗಿ ಚಿಗುರಾಗಿ ।
ರಾಜರ್ಷಿ ಜನಕನ। ಮನೆಯ ಬೆಳಕಾಗಿ। ನಲಿದಾಡಿದೆ. . . . ॥
ಯಜ್ಞಭೂಮಿಯ ಖನನದಿಂದುದಿಸಿ॥

[ಮೌನ]
ಈಗ

[ಬಾಲ್ಯದ ನಲಿದಾಟವನ್ನು ಅಭಿವ್ಯಕ್ತಿಸಿ ಒಮ್ಮೆಲೆ ಸದ್ಯದ ಸ್ಥಿತಿಯ ಸ್ಮರಣೆಯಲ್ಲಿ ಆಘಾತಗೊಂಡವಳಂತೆ]

ಜೀವನ ಯಜ್ಞದಲಿ ಪೂರ್ಣಾಹುತಿಯಾದೆನೆ ॥

ಮಾತು: ಅಪ್ಪನ ನೇಗಿಲು ನೋವು ನೀಡಲಿಲ್ಲ. ಜಗತ್ತಿಗೇ ಈ ಜಗನ್ಮಾತೆಯನ್ನು ನೀಡಿತು. ಆದರೆ ಶಿವಧನುವ ಮುರಿದ ಕೋದಂಡ ರಾಮನ ಬತ್ತಳಿಕೆಯ ಬಾಣ ತಾಯ್ತನದ ತಾಣಗಳನ್ನೆಲ್ಲ ತತ್ತರಿಸುವಂತೆ ಮಾಡಿತೇ. ಎಲ್ಲವೂ ನೆನಪುಗಳೇ.

☆☆☆☆

ರಾಗ : ಷಣ್ಮುಖಪ್ರಿಯ, ಆದಿ ತಾಳ

ಹಾಡು : ಯಜ್ಞ ರಕ್ಷಣೆಗಾಗಿ ಬಂದವನೆ ಶ್ರೀ ರಾಮ।
ಯಜ್ಞಕಾಹುತಿಯ ನೀಡಿದನೆ ।ಜೀವನ ।
ಯಜ್ಞಕರ್ಪಿಸಿದನೆ ತಾಟಕಿಯ ರೂಪದಲಿ।
ಹೆಣ್ತನವ ಕೋದಂಡ ರಾಮ।



ಮಾತು: ಅದೇ ರಾಮ ತ್ಯಜಿಸಿದ ಸೀತೆ ನಾನು. ಈ ಏಕಾಂತದಲ್ಲಿ ಆ ತಾಟಕಿಯನ್ನೇಕೆ ನೆನೆಯುತ್ತಿದ್ದೇನೆ? ರಾಕ್ಷಸಿ ಎಂದು ರಾಮ ಭಂಗಿಸಿದ . ರಕ್ಕಸಿಯಾದರೇನು ಹೆಣ್ಣಲ್ಲವೆ ಎಂದು ಸೀತೆಯ ಮನ ಆತಂಕಪಡುತ್ತಿದೆ. ಹೌದು. ಕವಿ ಹೃದಯದ ಮುನಿ ವಾಲ್ಮೀಕಿಯ ಮಹಾ ಕಾವ್ಯದ ಕೊನೆಯ ಪುಟದಲ್ಲೀಗ ಸೀತೆ ಹೆಣ್ಣಲ್ಲ. ಹೆಂಡತಿಯಲ್ಲ. ಪಟ್ಟದರಸಿಯಲ್ಲ. ಒಂದು ಪ್ರಶ್ನೆ ಮಾತ್ರ. ಬಸುರಿಯಾಗಿ ಪರಿತ್ಯಕ್ತಳಾದ ನನ್ನ ಮನ ರಾಮ ಕೊಂದ ತಾಟಕಿಯನ್ನು ಮಾತ್ರ ನೆನೆಯುತ್ತಿದೆಯೇ? ನನ್ನ ಶ್ರೀ ರಾಮನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದೆಯೇ? ಇಲ್ಲ. ಇಲ್ಲ. ಸಲ್ಲ. ಸಲ್ಲ. ಕರುಣಾಳು ರಾಘವನಲಿ ತಪ್ಪಿಲ್ಲ. ಶಿಲೆಯ ಅಂತಃಕರಣಕ್ಕೆ ಸ್ಪಂದಿಸಿದವನಲ್ಲವೇ ನನ್ನ ಭುವನಾಭಿರಾಮ. . .

☆☆☆☆

ರಾಗ : ವಲಚಿ, ಆದಿ ತಾಳ

ಹಾಡು : ವಿರಸ ದಾಂಪತ್ಯವನು
ಸರಸಗೊಳಿಸಿದ ಸೊಗಸುಗಾರ
ನನ್ನ ಶ್ರೀ ರಾಮ। ಭುವನಾಭಿರಾಮ॥
ಕಲ್ಲಾಗಿ ಕರಗಿದಹಲ್ಯೆಯ ಬಳಿಸಾಗಿ।
ಬಿಲ್ಲಾಗಿ ಬಾಗಿ ಸಿಡಿಯದೆ ಸವಿ ।
ಸೊಲ್ಲಾಗಿ ಸತಿ ಪತಿಯನೊಂದಾಗಿಸಿದವ।
ನನ್ನ ಶ್ರೀ ರಾಮ। ಭುವನಾಭಿರಾಮ॥




ಮಾತು: ಹೌದಲ್ಲ. ಭಗ್ನ ಪ್ರೇಮದ, ದಗ್ಧ ದಾಂಪತ್ಯದ ಅಹಲ್ಯೆಯನುದ್ಧರಿಸಿ ನೇರ ಬಂದುದು ನನ್ನ ಸ್ವಯಂವರ ಮಂಟಪಕ್ಕೆ. ಏಕೆ ಬಂದೆ? ತೊರೆಯಲೆಂದೆ ನನ್ನ ಪಡೆಯಲು ಬಂದೆಯಾ? ನೀನೀಗ ನನ್ನ ಬಳಿಯೊಳಿರಬೇಕಿತ್ತು ರಾಮ. . ತುಂಬಿದ ಉದರದೊಳಗೆ ನಿನ್ನ ಶಿವಶಕ್ತಿ ಅಡಗಿಸಿದ ಜೀವಶಕ್ತಿ ತೊಟ್ಟಿಲಾಡುವುದರ ಸ್ಪರ್ಷ ಸುಖವನ್ನನುಭವಿಸಲು ನೀ ನನ್ನ ಬಳಿಯೊಳಿಲ್ಲ. ನನ್ನ ಪಡೆಯಲೆಂದೇ ಶಿವಧನುವ ಮುರಿದವನೇ ಅಂದಿನ ಕಲ್ಯಾಣೋತ್ಸವ ಮತ್ತೆ ಈ ಕಾಡಿನಲ್ಲಿ ನನ್ನನ್ನು ಕಾಡುತ್ತಿದೆಯಲ್ಲ. . .

☆☆☆☆

ರಾಗ : ರೀತಿಗೌಳ, ಖಂಡಛಾಪು ತಾಳ

ಹಾಡು : ನೀ ಬಂದೆ ಕೋದಂಡ ರಾಮ।
ಅದಕೆಂದೆ ನಾ ಕಾದೆ ಸೀತಾ ರಾಮ।
ಪೃಥ್ವಿ ಪ್ರಮದೆಯ ಪಣದಿ ಸೋತವನ ನೀ।



ಗೆಲಿದೆನ್ನ ಗೆಲ್ಲಲು ಮುರಿದು ಬಿಲ್ಲನು ನೀ।
ಬೆಳಕಾದೆಯಾ . . . ।
[ತಾಳರಹಿತ]
ಮಿಥಿಲೆಯರಮನೆಯದರ ಕರಿನೆರಳು।
ಕಾಡುತಿದೆ ಕಾಡಿನಲಿ ರಾಮ॥

ಮಾತು: ನಿನ್ನೊಳಗೆ ಬೆಳಕಾದೆ. ಹೊರಗೆ ನೆರಳಾದೆ. ಪಟ್ಟದರಸಿಯಾದವಳು ಪಟ್ಟೆ ಪೀತಾಂಬರ ತೊರೆದು ನಾರುಡುಗೆಯ ನಾರಿಯಾದೆ. ಅತ್ತೆ ಕೈಕೆಯ ಮಾತೃ ಹೃದಯವನ್ನರಿತ ಓ ನನ್ನ ರಾಮ. . ದಶರಥರಾಮ. . ಕೋಸಲೆಯ ಕುರುಡುತನದಲ್ಲಿ ಈ ಕೋಮಲೆಗೆ ದಾರಿ ಕಾಣದೆ ಹೋಯಿತಲ್ಲ. ಸರ್ವ ಲೋಕ ಪ್ರಿಯನೆ ನೆನಪಾಗುತ್ತಿದೆ ಎಲ್ಲ.

☆☆☆☆

ರಾಗ : ಅಮೃತವರ್ಷಿಣಿ, ತಿಶ್ರ ನಡೆ ಆದಿತಾಳ

ಹಾಡು : ಕೆರಳಿ ಕೈಕೆ ವರವ ಕೇಳಿ ಕೋಸಲೆಯ ಕೊರಳ ಕೊಯ್ದು।
ಪಟ್ಟ ಭರತಗೆನಲು ಅರಸ ಮೌನಿಯಾಗೆ।
ಯಾರಿಗಾಗಿ ಮಿಡುಕಿದೆ ಓ ಕೋಸಲೇಂದ್ರ ಗುಣಾಬ್ಧಿಯೇ।
ತಾಯಿಗಾಗಿ ಮಿಡುಕಿದ ನೀ ಅರಿಯದಾದೆ ನನ್ನ ಕನಸು।
ಪಿತೃವಾಕ್ಯ ಪರಿಪಾಲನೆ॥

ಮಾತು: ಮಿಥಿಲೆಯಿಂದ ಮದುಮಗಳಾಗಿ ಹೊರಟಾಗ ಎಷ್ಟೊಂದು ಕನಸುಗಳನ್ನು ಹೊತ್ತಿದ್ದೆ.[ಅಲ್ಲಲ್ಲಿ ಅಲಾಪನೆ] ಕೋಸಲೆಯ ಕಣಜವನ್ನು ತುಂಬುವ ಭಾಗ್ಯಲಕ್ಷ್ಮಿ ನಾನೆಂದೆ ಭ್ರಮಿಸಿದ್ದೆ. ಆದರೇನಾಗಿ ಹೋಯಿತು? ನಾಡು ದೂಡಿತು. ಕಾಡು ಕೈಬೀಸಿ ಕರೆಯಿತು. ಅಂದು ಇಂದು ಸೀತೆಯ ಕನಸುಗಳೆಲ್ಲ ಕಾಡಿನ ಕನವರಿಕೆ ಮಾತ್ರವೇ? ಅರಣ್ಯರೋದನ ಮಾತ್ರವೇ? ಅಂದಿನ ಚಿತ್ರಕೂಟವೂ ಅರಣ್ಯದ ಒಂದು ಭಾಗವೆ. ಆದರೂ ನನ್ನ ಹೃದಯ ಗೆದ್ದವ ಅದನ್ನೊಂದು ಮಧುರ ನೆನಪಾಗಿಸಿದ್ದನ್ನು ಹೇಗೆ ಮರೆಯಲಿ? ದೇವಗಂಧರ್ವರಂತೆ ನಾವು ನಲಿದಾಡಿದ ತಾಣವಲ್ಲವೇ ಅದು. ನೆನಪಿದೆಯಾ ರಾಮ ಅಲ್ಲಿ ನೀನು ಉಲಿದದ್ದು?. . .

☆☆☆☆

ರಾಗ : ಕದನಕುತೂಹಲ, ತಿಶ್ರನಡೆ ಆದಿತಾಳ

ಹಾಡು : ನೋಡು ನೋಡು ನಲ್ಲೆ ನೋಡು।
ಜೋಡು ನವಿಲ ನಾಟ್ಯ ನೋಡು॥


ಮಾತು : ಆಗ ನಾನು ಹೇಳಿದ್ದೆ. .

ಹಾಡು : ನೋಡು ನೋಡು ನಲ್ಲ ನೋಡು।
ಸಿಂಹ ಜೋಡಿಯ ಆಟ ನೋಡು॥

ಮಾತು: ಇಬ್ಬರೂ ಕೈಕೈ ಹಿಡಿದು ಎದೆಯ ಹಾರವೂ ತಡೆಯಾಗದಿರಲೆಂದು ತೆಗೆದಿರಿಸಿ ಮೈಮೈ ತಾಗಿಸಿ ಒಂದೆ ಮನದಿಂದ ಕೂಡಿ ಹಾಡಿದ್ದೆವಲ್ಲ ನಾವು ರಾಮ. . .

☆☆☆☆

ರಾಗ : ಕದನ ಕುತೂಹಲ, ಮಿಶ್ರಛಾಪು ತಾಳ



ಹಾಡು : ಅರಳಿದ ಕೆಂದಾವರೆ।
ತಳಿರು ತೋರಣ ಹಸಿರ ಮಾಲೆ।
ಚಿತ್ರಕೂಟ ಪರ್ಣ ಶಾಲೆ।
ಮುಗಿಲ ತುಂಬ ಪ್ರೇಮದೋಲೆ।

ಮಾತು: ನಾವು ಮಾತ್ರವೇ! ದೇವಮಾನವ ಯಕ್ಷ ಗಂಧರ್ವರೆಲ್ಲ ಒಂದೆ ಕೊರಳಾಗಿ ಹಾಡಿದರಲ್ಲ ರಾಮ . . . ಅದರ ಪ್ರತಿಧ್ವನಿ ಕೇಳಿಸುತ್ತಿದೆಯಾ ಈ ರಾಮತೊರೆದ ಹೆಣ್ಣಿಗೆ ವಾಲ್ಮೀಕಿಯ ಕಾವ್ಯ ತರಂಗಿಣಿಯಲ್ಲಿ. . .

☆☆☆☆

ರಾಗ : ಹಮೀರ್ ಕಲ್ಯಾಣಿ

ಹಾಡು : ಜನಕಸ್ಯ ಕುಲೇಜಾತಾ । ದೇವ ಮಾಯೇವ ನಿರ್ಮಿತಾ।
ಸರ್ವಲಕ್ಷಣ ಸಂಪನ್ನಾ। ನಾರೀಣಾಮುತ್ತಮಾ ವಧೂ:॥

ಮಾತು: ಲೋಕ ಹಾಡುತ್ತಿದೆಯೇ ನಾನು ಸರ್ವಲಕ್ಷಣ ಸಂಪನ್ನೆ ಎಂದು – ನಾರೀ ಕುಲದಲ್ಲಿ ಶ್ರೇಷ್ಠಳು ಎಂದು – ಪರಮ ಸುಂದರಿ ಎಂದು. ಆಜಾನುಬಾಹು ರಾಮನನ್ನು ಈ ಮುಗ್ಧೆ ಅರಮನೆ ತೊರೆದು ಹಿಂಬಾಲಿಸಿದಳು. ..

☆☆☆☆

ರಾಗ : ಹಮೀರ್ ಕಲ್ಯಾಣಿ, ತಾಳರಹಿತ

ಹಾಡು : ಸೀತಾಪ್ಯನುಗತಾ ರಾಮಂ । ಶಶಿನಂ ರೋಹಿಣೀ ಯಥಾ. . .

ಮಾತು : ರೋಹಿಣಿಯಂತೆ ಚಂದ್ರನನ್ನು, ರಾಮಚಂದ್ರನನ್ನು ಹಿಂಬಾಲಿಸಿದೆ ನಾನು. . .ನಡುವೆ ಕಾಡಿನಲ್ಲಿ ಕಥೆ ವ್ಯಥೆಯಾಯಿತು. ನಮ್ಮಿಬ್ಬರ ನಡುವೆ ಮೋಡ ಕಾಡಾಯಿತು. ದಂಡಕಾರಣ್ಯ ಎಂಬ ಕಾಡು ನೋವಿನ ಹಾಡಾಯಿತು. . ಶೂರ್ಪನಖಿ ಎಂಬ ಹೆಣ್ಣನ್ನು ನೀನು ವಿರೂಪಗೊಳಿಸಿದ್ದು ನನ್ನ ಬಾಳಿನ ಅಂದವನ್ನು ವಿಕಾರಗೊಳಿಸಿತಲ್ಲ ರಾಮ. ಹೆಣ್ಣಿಗೆ – ಅಗ್ನಿಯಲ್ಲಿ ನೊಂದು ಬೆಂದು ಹೊರಬಂದ ಹೆಣ್ಣು, ನಾನು ಕೇಳುತ್ತಿದ್ದೇನೆ – ಹೆಣ್ಣಿಗೆ ಸೌಂದರ್ಯ ಒಂದು ಶಾಪವೇ?!

☆☆☆☆

ರಾಗ : ಕುಂತಲವರಾಳಿ, ಮಿಶ್ರಛಾಪು ತಾಳ
ಹಾಡು : ಚಂದದಿಂದ ಬಂದ ಶೂರ್ಪಣಖೆ।
ಲಂಕಾಧಿಪನ ತಂಗೆ।
ಕಂಡು ನಿನ್ನ ವರಿಸಲೆಂದು ।
ಮುಂದೆ ನಿಂದು ನಕ್ಕು ನಲಿಯೆ।
ಅವಳ ರೂಪ ನನ್ನ ರೂಪ।
ರೂಪ ರೂಪ ರೂಪ ರೂಪ।
ಶಾಪವಾಗಿ ತಾಪವಾಯಿತೆ ಹೆಣ್ಣ ಬಾಳಿಗೆ॥

ಮಾತು: ನಿನ್ನನ್ನು ನೋಡಿ ಶೂರ್ಪಣಖೆ ನಕ್ಕಳು. ಅವಳನ್ನು ನೋಡಿ ನಾನು ನಕ್ಕೆ. ಎರಡು ನಗುಗಳ ತಾಕಲಾಟದಲ್ಲಿ ನನ್ನ ನಿನ್ನ ಬಾಳಿನ ನಗುವೇ ಕಳೆದುಹೋಯಿತಲ್ಲ. ಅಂದು ಅವಳನ್ನು ನನಗಾಗಿ ದೂಡಿದೆ. ಇಂದೀಗ ಯಾರಿಗಾಗಿ ನನ್ನನ್ನೀ ಕಾಡಿಗೆ ದೂಡಿದೆ . . .ಸ್ವರ್ಣ ಜಿಂಕೆ ಸ್ವರ್ಣಲಂಕೆಯ ನಡುವೆ ನಾವು ಕಳೆದುಕೊಂಡದ್ದೆಲ್ಲವನ್ನು ಅರಸಲು ಅಡವಿಗೆ ಅಟ್ಟಿದೆಯಾ ಅರಸನೆ. ಎಲ್ಲಿ ಆ ಜಿಂಕೆ? ಏನು ಆ ಜಿಂಕೆ? . . .



☆☆☆☆

ರಾಗ : ವೃಂದಾವನ ಸಾರಂಗ, ತಿಶ್ರನಡೆ ಆದಿತಾಳ

ಹಾಡು : ಜಿಂಕೆ ಬಂತು। ಚಿನ್ನದ ಜಿಂಕೆ ಬಂತು।
ಚಂಚಲ ಮನಸಿಜ ಮಾಯೆಯ ಸುಳಿಯಲಿ।
ಲಂಕೆಯ ದಹಿಸಿದ ಜಿಂಕೆ ಬಂತೇ।
ಚಿನ್ನದ ಜಿಂಕೆ ಬಂತೇ॥ (ಮೌನ)
[ತಾಳರಹಿತ]
ಮಡದಿ ಮಂಡೋದರಿ ದಾಸಿ ಸರಮೆಯ ನಡುವೆ
ಒಡಲ ಒಲವ ಬೇಡಿದಂಥ
ಹತ್ತು ಮುಖಗಳಾಡಿದಂಥ ನುಡಿಯ ನಡೆಯ ಧಿಕ್ಕರಿಸಿ
ಮುದ್ರೆಯುಂಗುರ ಪಡೆದ ನನಗೆ
ಜಿಂಕೆ ಸಿಗದೇ ಹೋಯಿತು
ರಾಮಾ. . . ರಾಮಾ. . . ಬಣ್ಣದ ಜಿಂಕೆ ಸಿಗದೇ ಹೋಯಿತು॥

ಮಾತು: ಹೆಣ್ಣಿನ ಮನದಾಸೆಯ ಬಂಗಾರದ ಜಿಂಕೆಯನ್ನು ನೀನು ತರಲು ಹೋದಾಗ ಮೈದುನ ಲಕ್ಷ್ಮಣ ರಕ್ಷಣೆ ಒದಗಿಸಿದ್ದ. ಪ್ರತಿಭಟಿಸಿದೆ ನಾನು. ಲಕ್ಷ್ಮಣ ರೇಖೆಯನ್ನು ದಾಟಿದ ನನ್ನನ್ನು ಶಿಕ್ಷಿಸಲೆಂದೆ ಅದೇ ಲಕ್ಷ್ಮಣನೊಡನೆ ನನ್ನನ್ನು ಕಾಡಿನಲ್ಲಿ ತ್ಯಜಿಸಿಬರಲು ಹೇಳಿದೆಯಾ ಓ ನನ್ನ ರಾಮಾ... ಸೀತೆಯ ಬಾಳಿನ ಋತುಚಕ್ರ ಹೀಗೆ ಮುಗಿಯಿತೇ? ರಾಮಾ ನಾನು ಹೆಣ್ಣು. ಬಸುರಿನ ಭಾರ ನನಗೆ ಭಾರವಲ್ಲ. ಅದು ಸೊಗದ ಹಂದರ. ಅಲ್ಲಿ ಅಶೋಕವನದಲ್ಲೂ ನನ್ನದು ಏಕವ್ಯಕ್ತಿ ಪ್ರದರ್ಶನ. ಇಲ್ಲೀಗ ವಲ್ಮೀಕದ ನೆರಳಿನಲ್ಲೂ ನಾನು ಏಕಾಕಿ. ಅಲ್ಲ ... ಅಲ್ಲ...

☆☆☆☆

ರಾಗ : ಕಾನಡ, ರೂಪಕ ತಾಳ

ಹಾಡು : ರಾಮನೆಂಬ ಪುರುಷ ಶಕ್ತಿ। ಹರುಷದಿಂದ ನೀಡಿದಂಥ।
ಬಸಿರ ಉಸಿರು ಹಸುರಾಗಿಸಲು। ಮನಸು ತುಂಬಿದೆ। ರಾಮ।
ತಾಯ್ತನದ ಕನಸು ತುಂಬಿದೆ । ರಾಮ॥

ಮಾತು: ಸಾರ್ವಭೌಮತ್ವದ ಅಶ್ವಮೇಧವನ್ನು ನೀನು ಸಂಕಲ್ಪಿಸಿದರೆ ರಾಮ, ನೀರೆರೆಯಲು ಇನ್ನು ನಿನ್ನ ಬಳಿಗೆ ನಾ ಬರಲಾರೆ. . . ಚಿನ್ನದ ಜಿಂಕೆ ತರಲು ಸೋತು ಚಿನ್ನದ ಲಂಕೆಯನ್ನು ಗೆದ್ದು ಕೈಹಿಡಿದವಳನ್ನು ಅಗ್ನಿಪರೀಕ್ಷೆಗೊಳಪಡಿಸಿದ ನನ್ನ ರಾಮನಿಗೆ. . .

[ಕ್ಷಣ ಕಾಲ ಮೌನ. ತೀವ್ರ ಆಲಾಪನೆ. ಸೀತೆ ಅಗ್ನಿಯ ನಡುವೆ ಇದ್ದಂತೆ]

ರಾಗ : ಕಾನಡ, ಖಂಡಛಾಪು ತಾಳ

ಹಾಡು : ಸುಟ್ಟಿತೇ ಸೀತೆಯ ಕೆನ್ನಾಲಗೆಯ ಸುಳಿ ಸುಳಿ ಸುಳಿ।
ಸುಟ್ಟಿತೇ ಸಂಶಯದ ಮನದಬೇಗುದಿಯ ಒಳಸುಳಿಯ ಬಾಳ ಬೆಂಕಿ॥

ಮಾತು : ನನ್ನ ರಾಮನ ಯಜ್ಞಸಂಕಲ್ಪಕ್ಕೆ ದಕ್ಕುವವಳು ಈ ಸೀತೆಯಲ್ಲ. ಈ ಜೀವನ ಸಂಗಾತಿಯಲ್ಲ. ಎದೆಬೆಸುಗೆಯ ಜತೆಗಾತಿಯಲ್ಲ. ರಾಮ ನೀನು ಸುಟ್ಟ ಸೀತೆಯ ತ್ಯಜಿಸಿದ ಸಂಗಾತಿಯ ಒಡಲುರಿಯಿಂದ ಕೆಂಪಾದ ಸ್ವರ್ಣ ಸೀತೆ ಮಾತ್ರ.

[ಕುಹೂ . . .ಕುಹೂ. . .ಧ್ವನಿ ರಿಂಗುಣಿಸಿದಾಗ ಭಾರವಾದ ಹೆಜ್ಜೆಯಲ್ಲಿ ಸೀತೆ ಒಳಸರಿಯುತ್ತಿದ್ದಂತೆ]

☆☆☆☆



ರಾಗ : ಕುರಿಂಜಿ, ಆದಿತಾಳ

ಹಾಡು : ಉತ್ತರ ರಾಮಾಯಣದಲಿ ತುಂಬಿದ।  
ಪ್ರಶ್ನೆಗಳನುತ್ತರಿಸಲು।  
ವಲ್ಮೀಕದಾಳದಲಿ ನೆಲೆನಿಂತ ಸೀತೆ।  
ಮತ್ತೆ ಕೇಳಿದಳೆ ವಾಲ್ಮೀಕಿ ಕೋಕಿಲ ಗಾನ।  
ಕುಹೂ. . . ಕುಹೂ. . .

☆☆☆

ರಾಗ: ಸೌರಾಷ್ಟ್ರ/ಶ್ರೀ, ಆದಿತಾಳ  
ಹೆತ್ತು ಅವಳಿಗಳ ರವಿವಂಶ ಬೆಳಗಿಸಿ।  
ಮತ್ತೆ ಹಾಡಿದಳೆ ಶುಭಮಂಗಳವ।  
ಹುಟ್ಟು ಮಣ್ಣಿನಲಿ। ಕನಸು ಕಾಡಿನಲಿ।  
ಕಳೆದ ಬದುಕಿನಲಿ। ಬಸಿರ ಭಾರದಲಿ।  
ಸೀತೆಯಾದಳು ಮಾತೆ। ಮಾತೆಗೆ ಶುಭಮಂಗಳ॥

---



## ನಿಮ್ಮ ಬರಹ ನಮ್ಮ ಓದು...

**ಶಿರಸಿಯ ಜನಾರ್ಧನ ನರಸಿಂಹ ಭಟ್ಟ ಬೆಣ್ಣೆಗದ್ದೆ, ಬೆಂಗಳೂರಿನ ನೃಪತುಂಗ ರಸ್ತೆಯ ಮಿಥಿಕ್ ಸೊಸೈಟಿ, ಉಡುಪಿಯ ಡಾ. ಕೆ.ಆರ್ ಗುರುಪ್ರಸಾದ್, ಮೇದಿನಿ ಆಚಾರ್ಯ, ಪುತ್ತೂರಿನ ವಿದ್ವಾನ್ ದೀಪಕ್ ಕುಮಾರ್, ಶ್ರೀಲಕ್ಷ್ಮಿ ಅಚಾರ್ಯ ಈ ಸಾಲಿನ ಸದಸ್ಯರಾಗಿದ್ದಾರೆ.**

ದರ್ಶನ ಭ್ರಮರಿಯ ಉಳ್ಳಾಲ ಮೋಹನ್ ಕುಮಾರ್ ಅವರ ಸಂದರ್ಶನ ಬಹು ಸೊಗಸಾಗಿ ಮೂಡಿಬಂದಿದೆ. ಪುಟವಿನ್ಯಾಸವೂ ಚೆಂದವಾಗಿದೆ. ಅವರ ಶಿಷ್ಯಂದಿರಿಗೆಲ್ಲಾ ಇದು ಬಹಳ ಖುಷಿಯನ್ನು ತಂದಿದೆ. ಭ್ರಮರಿಯ ಬಳಗದಿಂದ ನಿಜಕ್ಕೂ ಉತ್ತಮ ಪ್ರಯತ್ನ.

**– ವಿದುಷಿ ಪಾವನಾ ರಾಜೇಂದ್ರ, ಉಡುಪಿ.ನ ; ವಿದ್ವಾನ್ ದೀಪಕ್ ಕುಮಾರ್, ಪುತ್ತೂರು.**

**– ಎನ್. ರಾಮ್ ಭಟ್, ಉಡುಪಿ. ; ಸುರೇಶ್ ಬಿ.ವಿ. ಜಾಲಹಳ್ಳಿ, ರಾಯಚೂರು.**

***

ಭ್ರಮರಿಯ ಹೊರಗಿನ ಹೊಸ ಆವರಣದ ಪರಿಷ್ಕೃತ ಆವರಣ, ಒಳಗಿನ ಅನುಭವೀಕೃತ ಹೂರಣಗಳು– ಎಲ್ಲವೂ ಆಕರ್ಷಣೆ ನೀಡುವಲ್ಲಿ ಹಿಂದುಳಿಯಲಿಲ್ಲ. ಅಭಿನಂದನೆಗಳು.

**–ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಬನಾರಿ, ಕಾಸರಗೋಡು.**



# ಹಸ್ತ ಮಯೂರಿ

**ಹಂಸಾಸ್ಯ ಹಸ್ತ**

ಲಕ್ಷಣ: ತೋರು ಮತ್ತು ಹೆಬ್ಬೆರಳ ತುದಿ ಸೇರಿಸಿ ಉಳಿದ ಮೂರು ಬೆರಳುಗಳನ್ನು ದೂರದೂರವಾಗಿ ನೀಡಿದಾಗ ಹಂಸಾಸ್ಯ. ಹಂಸಾಸ್ಯ ಎಂದರೆ ಹಂಸದ ಮುಖ ಎಂದರ್ಥ. ನಾಟ್ಯ ಶಾಸ್ತ್ರದಲ್ಲಿ ಹಂಸವಕ್ತ್ರ ಎಂದು ಹೆಸರು. ಹಸ್ತ ಮುಕ್ತಾವಳಿಯಲ್ಲಿ ತೋರು, ಹೆಬ್ಬೆರಳು, ಮಧ್ಯ ಬೆರಳನ್ನು ಸೇರಿಸಿ ಕಟಕಾಮುಖದಂತೆ ಹಿಡಿಯುವುದು ಕ್ರಮ. ಇದೇ ಕ್ರಮ ನಾಟ್ಯಶಾಸ್ತ್ರದಲ್ಲೂ ಇದ್ದು, ಬೆರಳುಗಳು ಒಂದನ್ನೊಂದು ಮುಟ್ಟದಂತೆ ವಿರಳವಾಗಿರಬೇಕು.

ದಕ್ಷಿಣಾಮೂರ್ತಿ ಸ್ವಾಮಿಯು ತತ್ವಪದ್ಧತಿಯನ್ನು ಋಷಿ–ಮುನಿಗಳಿಗೆ ನ್ಯಗ್ರೋಧ ವೃಕ್ಷದಡಿಯಲ್ಲಿ ಕುಳಿತು ಹೇಳಿಕೊಡುವಾಗ ಉಂಟಾದ ಹಸ್ತವಿದು. ಬ್ರಾಹ್ಮಣ ವರ್ಣ, ಶ್ವೇತ ಬಣ್ಣ, ಋಷಿ : ಶುಕ, ಅಧಿದೇವತೆ : ಬ್ರಹ್ಮ. ಇದು ಮಿಶ್ರಹಸ್ತ ಪ್ರಕಾರಕ್ಕೆ ಸೇರಿದ್ದು ಅಭಿನಯ ದರ್ಪಣ ನಿವೇದಿಸಿದ ನೃತ್ತ ಹಸ್ತಗಳಲ್ಲೂ ಒಂದೆನಿಸಿದೆ.

ಈ ಹಸ್ತ ಯೋಗಶಾಸ್ತ್ರದಲ್ಲಿ, ಪ್ರತಿಮಾಶಾಸ್ತ್ರದಲ್ಲಿ ಪ್ರಚಲಿತದಲ್ಲಿದ್ದು ಮುಖ್ಯವಾದ ಮುದ್ರೆಗಳಲ್ಲೊಂದೆನಿಸಿದೆ. ಇದನ್ನು ವ್ಯಾಖ್ಯಾನ ಮುದ್ರೆ, ಜ್ಞಾನ ಮುದ್ರೆ, ಸಂದರ್ಶನ ಮುದ್ರೆ ಮುಂತಾಗಿ ಕರೆಯಲಾಗಿದ್ದು; ದಕ್ಷಿಣಾಮೂರ್ತಿ, ಶಂಕರ–ರಾಮಾನುಜ–ಮಧ್ವ ಮುಂತಾದ ಆಚಾರ್ಯರ ಮುದ್ರೆಗಳಲ್ಲಿ ಬಹುಮುಖ್ಯವಾಗಿ ಕಾಣಸಿಗುತ್ತದೆ. ಶಾಸ್ತ್ರೀಯ ಮುದ್ರೆಗಳ ವಿಭಾಗದಲ್ಲಿ ಹಂಸಾಸ್ಯವನ್ನು ತತ್ವಜ್ಞಾನ ಮುದ್ರಾ ಎನ್ನಲಾಗಿದ್ದರೆ ಅಭಯ ಮುದ್ರೆಯ ಒಂದು ಬಗೆಯಲ್ಲಿ ಎರಡೂ ಕೈಯಲ್ಲಿ ಹಂಸಾಸ್ಯ ಹಸ್ತದ ಸೂಚನೆಯಿದೆ. ಪೂಜಾಮುದ್ರೆಗಳಲ್ಲೊಂದೆನಿಸಿದ ಘಂಟಾ ಮುದ್ರೆಯು ಹಂಸಾಸ್ಯ ಹಸ್ತವೇ ಆಗಿದ್ದು ಶಿಸ್ತಿನ ಸಂಕೇತವನ್ನೀಯುತ್ತದೆ.

ಯೋಗಮುದ್ರೆಗಳ ಪೈಕಿ ಪದ್ಮಾಸನದಲ್ಲಿ, ಸುಖಾಸನದಲ್ಲಿ ಎರಡೂ ಕೈಗಳಲ್ಲಿ ಹಂಸಾಸ್ಯ ಹಸ್ತ ಅಂದರೆ ಜ್ಞಾನಮುದ್ರೆಗಳನ್ನು ಹಿಡಿದರೆ ಅದು ಧ್ಯಾನ ಜ್ಞಾನ ಯೋಗ ಮುದ್ರೆಯೆನಿಸುತ್ತದೆ. ಮಾನಸಿಕ ಶಾಂತಿ, ಏಕಾಗ್ರತೆ, ದೈಹಿಕ ಕಾಂತಿ, ಆಧ್ಯಾತ್ಮಿಕ ಭಾವನೆಗಳು, ಶುದ್ಧ ಮನಸ್ಥಿತಿ–ಭಾವನೆಗಳು, ಆತ್ಮಸಾಕ್ಷಾತ್ಕಾರ, ಸ್ನಾಯು–ಹೃದಯ–ಥೈರಾಡ್ಸ್ ಸಂಬಂಧೀ ಬಲಕ್ಕೆ, ಬ್ರಹ್ಮಾನಂದ ಸ್ಥಿತಿ ಮತ್ತು ಸಮಾಧಿ ಸ್ಥಿತಿ ತಲುಪಲು ಸಹಕಾರಿ. ಅಷ್ಟಾಂಗಯೋಗದ ಧ್ಯಾನ ಕ್ರಿಯೆಯಲ್ಲಿ ಇದು ಮುಖ್ಯ ಮತ್ತು ಲಾಭಕಾರಿ ಮುದ್ರೆ. ಪದ್ಮಾಸನ ಅಥವಾ ಸುಖಾಸನ, ಸ್ವಸ್ತಿಕಾಸನದಲ್ಲಿ ಕುಳಿತು ಮಾಡುವುದರಿಂದ ಇದನ್ನು ಸಹಜಧ್ಯಾನ ಮುದ್ರೆ ಎಂದೂ ಕರೆಯುತ್ತಾರೆ. ಇದು ಮಾನಸಿಕ ಶಾಂತಿಗೆ, ದೈಹಿಕ ಕಾಂತಿಗೆ, ಸ್ನಾಯುಬಲಕ್ಕೆ, ಸತ್ವಯುತ ವಿಚಾರಗಳ ಉದ್ಭವಕ್ಕೆ, ಆತ್ಮಸಾಕ್ಷಾತ್ಕಾರಕ್ಕೆ, ನೆಮ್ಮದಿಗೆ, ಏಕಾಗ್ರತೆ, ಅಧಿಕ ರಕ್ತದೊತ್ತಡ ನಿವಾರಣೆಗೆ, ಹೃದಯಾಘಾತದ ಸಂಭವನೀಯತೆ ಕಡಿಮೆಗೊಳಿಸಲು ಅನುಕೂಲ.

ಅದರಂತೆಯೇ ಎರಡೂ ಕೈಗಳಲ್ಲಿ ಹಂಸಾಸ್ಯ ಹಸ್ತಗಳನ್ನು ಹಿಡಿದು ಎಡಹಸ್ತದ ಅಂಗೈ ಹೃದಯಾಭಿಮುಖ ವಾಗಿದ್ದು, ಬಲಕೈಯ್ಯ ಹಿಂಭಾಗವು ಹೃದಯಾಭಿಮುಖವಾಗಿದ್ದು ಎಡಹಸ್ತದ ಮಧ್ಯದ ಬೆರಳನ್ನು ಸ್ಪರ್ಶಿಸುವುದು ದ್ವಿಜನ್ಮ ಚಕ್ರ ಮುದ್ರೆಯೆನಿಸಿಕೊಳ್ಳುತ್ತದೆ. ಜೀವನ ಧೈರ್ಯವನ್ನು ನೀಡುವ ಮುದ್ರೆಯಿದು.

ಚಿಕಿತ್ಸಾ ಮುದ್ರೆಗಳ ಪೈಕಿ ಹಂಸಾಸ್ಯ ಹಸ್ತಕ್ಕೆ ಅಗ್ರ ಸ್ಥಾನವಿದೆ. ಇದನ್ನು ಮುದ್ರೆಗಳ ರಾಜವೆನ್ನುತ್ತಾರೆ. ಅಂಗೈ ಮೇಲ್ಮುಖವಾಗಿರಿಸಿ ಹೆಬ್ಬೆರಳು ಮತ್ತು ತೋರುಬೆರಳ ತುದಿಗಳನ್ನು ಕೂಡಿಸುವುದು ಜ್ಞಾನಮುದ್ರೆಯೆನಿಸಿ ಕೊಂಡರೆ ಅಂಗೈ ಕೆಳಮುಖವಾಗಿದ್ದಾಗ ಅದನ್ನು ಚಿನ್ಮುದ್ರೆಯೆನ್ನುತ್ತಾರೆ. ಈ ಮುದ್ರೆಗೆ ಸಮಯದ ಬಂಧನವಿಲ್ಲ.

ಹೆಬ್ಬೆರಳು ಅಗ್ನಿ ತತ್ತ್ವವನ್ನು ಪ್ರತಿನಿಧಿಸಿದ್ದು ; ಮನಸ್ಸಿಗೆ ಕಾರಕವಾಗಿದ್ದು, ಶಿರಸ್ಸಿಗೂ ಸಂಬಂಧ ಹೊಂದಿದೆ. ತೋರುಬೆರಳಿಗೆ ಸಂಬಂಧಿಸಿದ ವಾಯುತತ್ತ್ವದ್ದು ಚಂಚಲ ಮನೋವೃತ್ತಿ. ಇವೆರಡರ ಸಂಯೋಜನೆಯು ಸಮತೋಲನ ಮತ್ತು ಸ್ಥಿರತೆಯನ್ನು ನೀಡುತ್ತದೆ. ಇದನ್ನು ಸಂಯಮ ಮುದ್ರೆಯೆಂದು ಕರೆಯುವ ಪರಿಪಾಠವೂ ಇದೆ. ಇದು ಮನಃಶಾಂತಿಗೆ, ಏಕಾಗ್ರತೆ, ಪಿಟ್ಯುಟರಿ ಪೀನಿಯಲ್ ಮತ್ತು ಮೆದುಳಿನ ಗ್ರಂಥಿ, ಸ್ವರ ಯಂತ್ರದ ಸುಸ್ಥಿತಿಗೆ, ಅಧ್ಯಯನಶೀಲತೆಗೆ, ದಕ್ಷತೆಗೆ, ಜ್ಞಾನ ತಂತುಗಳ ಮೇಲೆ ಪರಿಣಾಮ. ಸ್ಮರಣಶಕ್ತಿ ವೃದ್ಧಿ, ನರ ದೌರ್ಬಲ್ಯ–ನಿದ್ರಾಹೀನತೆ, ಮಾನಸಿಕ ವೇದನೆಗೆ ಪರಿಹಾರ. ವಿದ್ಯುದಯಸ್ಕಾಂತೀಯ ಅಲೆಗಳಲ್ಲಿ ಬಲವಾದ ಸಂವಹನ. ಹುಚ್ಚು–ಉನ್ಮಾದ–ರೇಗುವಿಕೆ–ಹಟಮಾರಿತನ, ತಲೆನೋವು–ನಿದ್ರಾಹೀನತೆ, ನರಗಳ ಬಾವು– ಬೆನ್ನುಹುರಿ ರೋಗ–ತೊದಲು–ಕಣ್ಣಿನ ತೊಂದರೆ–ಶರೀರ ಚಲನೆಯಲ್ಲಿ ಅಸ್ಥಿರತೆ–ದುಷ್ಚಟ–ಭಯ–ಸಂಶಯಗಳ ನಿವಾರಣೆಗೆ, ಕ್ರೋಧ ಶಮನಕ್ಕೆ, ಆಜ್ಞಾಚಕ್ರದ ಜಾಗೃತಿ, ಉದ್ವೇಗ, ಚಂಚಲತೆ, ಆಲಸ್ಯಕ್ಕೆ ಔಷಧಿ. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ, ಬುದ್ಧಿ ಮಾಂದ್ಯ ಮಕ್ಕಳ ಬೆಳವಣಿಗೆ ಇತ್ಯಾದಿಗಳ ಪರಿಹಾರಕ್ಕೆ ಉಪಯೋಗ. ಒಟ್ಟಿನಲ್ಲಿ ಸೊಂಟದ ಕೆಳಗಿನಿಂದ ಕಾಲ್ಬೆರಳಿನ ತುದಿಯವರೆಗಿನ ತೊಂದರೆಗಳ ನಿವಾರಣೆಗೆ ಸಹಕಾರಿ.

ಹಂಸಾಸ್ಯ ಹಸ್ತದ ಮತ್ತೊಂದು ಬಗೆಯ ಬಳಕೆ ಧಾರಣಾ ಶಕ್ತಿ ಮುದ್ರೆಯೆನಿಸಿಕೊಳ್ಳುತ್ತದೆ. ಇದರಲ್ಲಿ 3 ಹಂತಗಳಿದ್ದು ಎರಡನೇ ಬಾರಿಗೆ ತೋರುಬೆರಳನ್ನು ಹೆಬ್ಬೆರಳ ಮಧ್ಯಗೆರೆಗೆ, ನಂತರ ಅಡಿಗೆರೆಗೆ ಮುಟ್ಟಿಸಬೇಕು. ಈ ಮುದ್ರೆಯನ್ನು ಪ್ರಾಣಾಯಾಮದ ಪೂರಕ, ಕುಂಭಕ ಮಾಡುವಲ್ಲಿ ಬಳಸಿದರೆ ಶ್ವಾಸಕೋಶಗಳಿಗೆ ಹೆಚ್ಚು ಪ್ರಾಣಾಯಾಮ ಸಂಚಾರ, ಶ್ವಾಸಗಳ ಸಂಖ್ಯೆ ಕಡಿಮೆಯಾಗಿ ಆಯುಷ್ಯ ವೃದ್ಧಿ, ರಕ್ತ ಶುದ್ಧಿಗೆ, ಕಲ್ಮಷ ನಿವಾರಣೆಗೆ, ಶರೀರ ಬಲ ವೃದ್ಧಿಗೆ ಸಹಕಾರ.

ವಿನಿಯೋಗ : ಮಂಗಳಸೂತ್ರವನ್ನು ಕಟ್ಟುವುದು, ಉಪದೇಶ, ನಿಶ್ಚಯವಾಗಿ ಎಂಬಂತೆ, ರೋಮಾಂಚನಗೊಳ್ಳುವುದು, ಮುತ್ತಿನ ಮಾಲೆ, ಚಿತ್ರವನ್ನು ಬಿಡಿಸುವುದು, ಕಚ್ಚುವುದು, ನೀರಿನಹನಿ, ದೀಪದ ಬತ್ತಿಯನ್ನು ಸರಿಮಾಡುವುದು, ಒರೆಹಚ್ಚುವಿಕೆ, ಶೋಧಿಸುವುದು, ಮಲ್ಲಿಗೆ ಮೊದಲಾದ ಹೂ, ಗೆರೆ ಎಳೆಯುವಿಕೆ, ಪುಷ್ಪ ಹಾರ ಹಿಡಿಯುವುದು, 'ನಾನೇ ಬ್ರಹ್ಮ' ಎಂಬುದನ್ನು ಸೂಚಿಸುವುದು, ಇಲ್ಲವೆನ್ನುವುದು, ಒರೆ ಹಚ್ಚುವ ವಸ್ತು ವೀಕ್ಷಣೆ, ಕೃತಕೃತ್ಯತೆ, ಶುಭಸೂಚಕ ಸಂದರ್ಭ, ಚಿತ್ರ ಬರೆಯುವುದು.

ಇತರೇ ವಿನಿಯೋಗ : 'ಅವನೇ ನಾನು' ಮತ್ತು 'ಅಹಂಬ್ರಹ್ಮಾಸ್ಮಿ', 'ತಾನೇ ದೇವರು', 'ಅಲ್ಲಿದೆ' ಎಂಬ ಭಾವನೆ, ಧ್ಯಾನ, ಸ್ವಲ್ಪ ಎಂಬ ಅರ್ಥ, ಕ್ರಿಯೆ ಅಥವಾ ಆರಾಧನೆ, ಮಾತನಾಡುವುದು, ಓದುವುದು, ಹಾಡುವುದು, ಧ್ಯಾನ, ಭಾವ ವ್ಯಕ್ತಪಡಿಸುವುದು, ಕೆಂಪುಬಣ್ಣವನ್ನು ಲೇಪಿಸುವುದು, ಎಳ್ಳಿನ ಬೀಜವನ್ನು ಕೊಡುವುದು, ತಲೆಯ ಹೊಟ್ಟು ಅಥವಾ ಚರ್ಮದಲ್ಲಿನ ದದ್ದು, ಸುವಾಸನೆ, ಹನಿ, ನಿರ್ಧಾರ, ಕೊಳಲನ್ನೂದುವುದು, ಕುರಿಮಂದೆ, ಬಾಣ ಹಿಡಿದ ಭಾವ, ಪಾರಿವಾಳದ ಗೂಡು, ಗೌಪ್ಯ ಸಂಭಾಷಣೆ, ನೂಲುವುದು, ಪೂಜೆ, ಮೃದುತ್ವ, ಹಗುರ, ಶೈಥಿಲ್ಯ, ಸೂಕ್ಷ್ಮತ್ವ, ಮಾರ್ದವ, ನಿಸ್ಸಾರ, ಪ್ರತಿಜ್ಞೆಸ್ವೀಕಾರ, ಬ್ರಾಹ್ಮಣ ಜಾತಿ, ಬಿಳಿ, ಮುದ್ರಾ ಉಂಗುರ, ನುಣುಪು ಮಾಡುವುದು, ರೇಖೆಗಳ ಪ್ರತ್ಯೇಕ, ಸ್ವಲ್ಪ, ಹಗುರ ಮತ್ತು ಸಡಿಲ, ಹೂ ಬಿಡಿಸುವುದು, ಸಡಿಲ, ಚಿಕ್ಕದು, ನಿರ್ಗಮನ, ನಿರೂಪಕ.

ಕೆಳತುಟಿ, ಮುತ್ತನ್ನೀಯುವುದು, ಕುಡಿಯುವುದು, ಲೇಪನ, ಅಗರವೆಂಬ ಕಟ್ಟಿಗೆ, ಕಸ್ತೂರಿ, ಕರ್ಪೂರ, ಕೇಸರಿ, ಹಾಲು, ಬೆಣ್ಣೆ, ತುಪ್ಪ, ಎಣ್ಣೆ, ಪರಿಮಳ, ಶ್ವಾಸ, ನಸ್ಯ ಸೇವನೆ, ಬಣ್ಣ ಲೇಪನ, ಚೂರ್ಣಗಳು, ಧೂಳು, ತಿಕ್ತ ರುಚಿ, ಗ್ರಂಥಿಪರ್ಣವೆಂಬ ಸುವಾಸಿತ ವಸ್ತು, ಚಂಪಕ–ಮಾಲತಿ–ಮಲ್ಲಿಕಾಗಳೆಂಬ ಹೂವುಗಳು, ಸಿಂಧೂರ, ಕಾಡಿಗೆ, ನೋಡುವುದು, ತ್ವರಿತ, ಕಿವಿಗಳು, ಕಾಗೆಗಳ ಸಂಕುಲ, ಪಾರಿವಾಳ–ಪಿಕಗಳ ಕೊಕ್ಕು, ಹಂಸ, ಗರುಡ, ನವಿಲು, ಸಾರಿಕ ಪಕ್ಷಿ, ಗಿಳಿ, ಚಕ್ರವಾಕ, ಚಕೋರ, ಕಂಜನ ಪಕ್ಷಿ, ಸಾರಸ ಪಕ್ಷಿ, ಕಲಹಂಸ ಪಕ್ಷಿ, ರಾಜಹಂಸ ಮುಂತಾದ ಪಕ್ಷಿಗಳು, ಇರುವೆ, ಕೀಟ, ಸೊಳ್ಳೆ, ಕಾಡುನೊಣ, ಇಲಿ, ಚೇಳು, ಬೆಂಕಿ, ತುರಿಕೆ, ಮಗು, ಲಘುವಸ್ತುಗಳು, ವೃಕ್ಷದ ಹೃದಯ ಭಾಗ, ಆಭರಣ, ಆನಂದ, ಕೆಮ್ಮು, ಧಾನ್ಯದ ಹೊಟ್ಟು, ದ್ರವೌಷಧಿ, ಮೇಣದಿಂದ ಮಾಡಿದ ವಸ್ತು,

ಪಾದರಸದಿಂದಾದ ವಸ್ತು, ಹಳದಿ ವಿಷವಸ್ತು, ವರ್ಣಮಯ ವಸ್ತು, ಕೋಮಲ ವಸ್ತು, ಶಿಥಿಲತೆ, ನಾಡಿಮಿಡಿತ, ಸಣ್ಣ ಪ್ರಮಾಣ, ಹಂಸಮುಖಿ, ಭಾವುಕತೆ, ವಿಷಯದ ಮುಖ್ಯಭಾಗ, ಉತ್ಸವ, ಮನಸು, ಹೃದಯ, ಜೀವನ, ಹಣ, ವಚನ, ತತ್ವಸಾರ ಇತ್ಯಾದಿ.

ಸಂಕರ ಹಸ್ತ ವಿಭಾಗದಲ್ಲಿ ಹಂಸಾಸ್ಯ ಹಸ್ತವನ್ನು ಕಿವಿಯಲ್ಲಿ ಹಿಡಿದರೆ ಕಿವಿಯಲ್ಲಿಟ್ಟಿರುವ ಹೂವು ಎಂದು, ಮೂಗಿನಬಳಿ ಹಿಡಿದರೆ ಮೂಗಿನಲ್ಲಿ ಧರಿಸಿದ ಪುಷ್ಪವೆಂದೂ, ಎಡಕಿವಿಯಿಂದ ಬಲಕಿವಿಯವರೆಗೆ ತಿರುಗಿಸಿ ಹಿಡಿದರೆ ಮುಂಗುರುಳೆಂದೂ, ಸೊಂಟದ ಎರಡೂ ಪಾರ್ಶ್ವಗಳಲ್ಲಿ ಹಿಡಿದರೆ ವಸ್ತ್ರಧಾರಣೆಯೆಂದೂ, ಬೈತಲೆಯ ಪ್ರದೇಶದಿಂದ ಹಣೆಯವರೆಗೂ ಇಳಿಸಿದರೆ ಬೈತಲೆ ಬೊಟ್ಟು ಎಂದೂ, ಹಸ್ತವನ್ನು ಚಲಿಸಿದರೆ ಯೌವನವೆಂದೂ, ಎಡಭುಜದಿಂದ ವಕ್ಷಸ್ಥಲವನ್ನು ಆಶ್ರಯಿಸುವಂತೆ ಹಿಡಿದರೆ ಯಜ್ಞೋಪವೀತವೆಂದೂ, ಕತ್ತಿನಿಂದ ವಕ್ಷಸ್ಥಲದಲ್ಲಿ ಅಡ್ಡವಾಗಿ ಚಾಲಿಸಿದರೆ ಹಾರವೆಂದೂ, ಒಂದು ಬಗೆಯ ಯಾತ್ರೆಯೆಂದೂ, ತುಟಿಯ ಬಳಿ ಹಿಡಿದರೆ ಚುಂಬನ ಅಥವಾ ಮಿಲನವೆಂದೂ ಅರ್ಥ.

ನಾನಾರ್ಥ ಹಸ್ತ ವಿಭಾಗದಲ್ಲಿ ಒಂದು ಯಾಮವೆಂದು ಸೂಚಿಸಲು ಹಸ್ತವಾಗಿ ಅಡ್ಡಲಾಗಿಯೂ, 'ಕರ್ಮಣೀ ಪ್ರಯೋಗಕ್ಕಾಗಿ ಕೆಳಗಾಗಿಯೂ ಉಪಯೋಗಿಸಲಾಗಿದೆ. ಕೆಳಗೆ ಹಿಡಿದರೆ 'ತತ್ ಪ್ರತ್ಯಯಾಂತ' ವ್ಯಾಕರಣಕ್ಕೂ ಬಳಸಬಹುದು. ಎರಡೂ ಹಂಸಾಸ್ಯಗಳನ್ನು ಮೂಗಿನ ತುದಿಯಲ್ಲಿ ಹೊಳ್ಳೆಗಳಿಗೆ ಹಿಡಿದರೆ ಉಸಿರಾಟ ಅಥವಾ ಒಳ ಭಾವನೆ, ಸಮಾಧಾನ, ನಿತ್ರಾಣ, ಇನ್ನೊಬ್ಬರಲ್ಲಿ ಆತ್ಮವಿಶ್ವಾಸ ಮೂಡಿಸುವುದು, ಸಂತೋಷವೆಂದೂ ಅರ್ಥ.

ಎಡಗೈಯಲ್ಲಿ ಚತುರಹಸ್ತವನ್ನು ಬಲಗೈಯಲ್ಲಿ ಹಂಸಾಸ್ಯ ಹಸ್ತವನ್ನು ಎದೆಯ ಮುಂದೆ ಇರಿಸಿದರೆ ಅದು ಬ್ರಹ್ಮಹಸ್ತ. ಎಡಗೈಯ್ಯಲ್ಲಿ ಹಂಸಾಸ್ಯ ಹಸ್ತ ಮತ್ತು ಬಲಗೈಯ್ಯಲ್ಲಿ ಸೂಚೀಹಸ್ತವನ್ನು ಹಿಡಿಯುವುದು ಸರಸ್ವತೀ ಹಸ್ತ. ಎರಡೂ ಕೈಗಳಲ್ಲಿ ಹಂಸಾಸ್ಯ ಹಸ್ತ ಹಿಡಿದು ಎದೆಯ ಮುಂದೆ ಇರಿಸುವುದು ಬುದ್ಧಾವತಾರ ಹಸ್ತ. ಭರತಾರ್ಣವ ಹೇಳುವ ಶಿವನ ಪಂಚ ಮುಖಗಳ ಪೈಕಿ ಮೊದಲನೇಯ ಮುಖ ಸದ್ಯೋಜಾತ ಮೂರ್ತಿಯ ಸಂಕೇತ ಹಂಸಾಸ್ಯ ಹಸ್ತಗಳನ್ನು ಕಿವಿಯ ಬಳಿ ಹಿಡಿಯುವುದು.

ಜಾತಿ ಹಸ್ತಗಳಲ್ಲೊಂದೆನಿಸಿದ ವೈಶ್ಯ ಹಸ್ತದ ಸಂಕೇತ ಎಡಗೈಯಿಂದ ಹಂಸಾಸ್ಯವನ್ನೂ, ಬಲಗೈಯಿಂದ ಕಟಕಾಮುಖವನ್ನು ಹಿಡಿದು ತೂಗುವಂತೆ

ಮಾಡುವುದು ಅಥವಾ ಎಡ ಮತ್ತು ಬಲ ಕೈಗಳು ಕ್ರಮವಾಗಿ ಹಂಸಾಸ್ಯ ಮತ್ತು ಸಂದಂಶವನ್ನು ಹಿಡಿಯುವುದು. ಬಾಂಧವ್ಯ ಹಸ್ತವಾದ ಭಾರ್ಯಾ ಹಸ್ತ (ಪತ್ನಿ)ಕ್ಕೆ ಎಡಗೈಯ್ಯಲ್ಲಿ ಹಂಸಾಸ್ಯ ಹಸ್ತವನ್ನು ಕಂಠದ ಬಳಿ ಹಿಡಿದು ಸಂದಂಶವನ್ನು ಹೊಕ್ಕುಳ ಬಳಿ ಹಿಡಿಯಬೇಕು. ಅಂತೇಯೇ ಭರ್ತೃ ಹಸ್ತ (ಗಂಡ) ಸೂಚನೆಗೆ ಕಂಠದ ಹತ್ತಿರ ಹಂಸಾಸ್ಯ ಹಸ್ತ ಹಿಡಿದು, ಬಲಕೈನಲ್ಲಿ ಶಿಖರ ಹಸ್ತ ಮಾಡಬೇಕು. ಹಂಸಾಸ್ಯ ಹಸ್ತದ ಬಳಕೆ ಶ್ವಶ್ರೂ ಹಸ್ತ (ಅತ್ತೆ) ಸೂಚನೆಗೆ,ಭರತಾರ್ಣವ ತಿಳಿಸುವ ಸಮಯಸೂಚೀ ಹಸ್ತಗಳ ಪೈಕಿ ಯಾಮ (ಅಂದರೆ 3 ಗಂಟೆ) ಎನ್ನಲು, ನದೀ ಹಸ್ತಗಳ ಪೈಕಿ ತುಂಗಭದ್ರಾ ಮತ್ತು ಪಕ್ಷಿ ಹಸ್ತಗಳ ಪೈಕಿ ಹಂಸ ಎನ್ನಲು ಬಳಸಲಾಗುವುದು.

ಯಕ್ಷಗಾನದಲ್ಲಿ ವಿವಾಹ, ಮಾಲೆ, ಮನ್ಮಥ, ಸೌಂದರ್ಯ, ಮುತ್ತು, ಸತಿ, ಮಾತನಾಡುವುದು ಎಂಬ ಅರ್ಥಗಳಿಗಾಗಿ ಬಳಸುತ್ತಾರೆ.

ನಿತ್ಯಜೀವನದಲ್ಲಿ ಬರೆಯುವುದು ಎಂದು ಸೂಚಿಸಲು, ಹಣೆಗೆ ಬೊಟ್ಟಿಡಲು, ಕಿವಿಯ ಆಭರಣ ಹಾಕಿಕೊಳ್ಳುವಾಗ, ಚಿವುಟಲು, ಕೀಳಲು ಮುಂತಾದವುಗಳ ಸಂವಹನಕ್ಕೆ ಬಳಸುತ್ತಾರೆ.

ಹಂಸಾಸ್ಯ ಹಸ್ತದ ಉಂಗುರ ಬೆರಳನ್ನು ಜೊತೆಗೆ ಕೂಡಿಸಿದರೆ ಖಡ್ಗಾಸ್ಯ ಎನ್ನುವ ಹಸ್ತವೇರ್ಪಡುತ್ತದೆ. ಹಂಸಾಸ್ಯದಲ್ಲಿ ಹೆಬ್ಬೆರಳು ಪಕ್ಕಕ್ಕೆ ಚಾಚಿಕೊಂಡರೆ ರಣಗೃಧ್ರ ಹಸ್ತ. ಇವೆರಡೂ ನರ್ತನ ನಿರ್ಣಯದಲ್ಲಿ ಉಲ್ಲೇಖಿತ. ವಿನಿಯೋಗಗಳು ಕಂಡುಬಂದಿಲ್ಲ.

ಕಥಕಳಿಯಲ್ಲಿ ಹಂಸಾಸ್ಯಕ್ಕೆ ಮುದ್ರಾಖ್ಯವೆಂದು ಹೆಸರು. ವಿನಿಯೋಗ : ವರ್ಧನೆ, ಚಲನೆ, ಸ್ವರ್ಗ, ಸಮುದ್ರ, ಸಾಂದ್ರತೆ, ವಿಜ್ಞಾಪನೆ, ವಸ್ತು, ಮರಣ, ಧ್ಯಾನ, ಪರಿಭವ, ಪ್ರಾಣ, ಭವಿಷ್ಯ, ಜ್ಞಾನ, ನೆನಪು, ಆಸೆ, ಇಚ್ಛೆ, 'ತಾನು''ಎಲ್ಲ' ಎನ್ನಲು, ಚಿಂತೆ, ಚಿತ್ತ, ನೇರ, ಯಜ್ಞೋಪವೀತ. ಇದು ಕಥಕಳಿಯಲ್ಲಿ ಅಸಂಯುತ ಹಸ್ತವಷ್ಟೇ ಅಲ್ಲದೆ ಕಥಕಳಿ ತಿಳಿಸುವ ಮಿಶ್ರ ಹಸ್ತಗಳಲ್ಲೂ ಪ್ರತ್ಯೇಕ ಮತ್ತು ಸಂಯೋಗ ನೆಲೆಗಳಲ್ಲಿ ಸ್ಥಾನ ಪಡೆದಿದೆ. ಪ್ರತ್ಯೇಕ ನೆಲೆಯಲ್ಲಿ ಮುದ್ರಾಖ್ಯವು ಸಾಧನ, ನಿಷೇಧ, ಖಾದ್ಯ, ಸರಪಳಿ, ಸರ, ಒಳ್ಳೆಯ ಭವಿಷ್ಯ ಅಥವಾ ಗುಣ, ಕಾರ್ಯ, ಧರ್ಮ, ಇಷ್ಟ, ಪ್ರಣಯವನ್ನು ಸಂವಹಿಸುತ್ತದೆ.

ಒಡಿಸ್ಸಿಯಲ್ಲಿ ಹಂಸಾಸ್ಯವನ್ನು ಮೃಗಾಸ್ಯ(ಖ್ಯ)ವೆನ್ನುತ್ತಾರೆ. ಒಡಿಸ್ಸಿಯ ಭಂಗಿಗಳಲ್ಲೊಂದಾದ ಲಾಖಿ ಭಂಗಿಗೆ ಧ್ವಜ ಮತ್ತು ಮೃಗಾಖ್ಯ ಹಸ್ತಗಳ ನೆರವು ಬೇಕು.

ಮಣಿಪುರಿಯಲ್ಲಿ ಈ ಹಸ್ತವನ್ನು ಸಂದಂಶವೆಂದು ಹೇಳಲಾಗಿದೆ. ಕಥಕಳಿ ಮತ್ತು ಮಣಿಪುರಿಯಲ್ಲಿ ಕಟಕಾಮುಖ ಹಸ್ತವನ್ನು ಹಂಸಾಸ್ಯವೆಂದು ಸಂಬೋಧಿಸುತ್ತಾರೆ.

ಕಥಕ್ ನೃತ್ಯಪದ್ಧತಿಯ ಪ್ರಕಾರ ಈ ಹಸ್ತವು ಪ್ರಾಥಮಿಕವಾದ 'ಸ್ವಾಭಾವಿಕ' ಹಸ್ತ ಪ್ರಕಾರಕ್ಕೆ ಸೇರಿದ್ದು ; ವಿಭಿನ್ನ ಗತಿಗಳ ಪೈಕಿ ಮೆಹಬೂಬಾ ಗತಿಯಲ್ಲಿ ಹಂಸಾಸ್ಯ ಬಳಕೆ ಪ್ರಧಾನವಾಗಿ ಕಾಣಸಿಗುತ್ತದೆ. ✪

## ಒಳನೋಟ

- **1st Sept :** Sai Nrityotsav - 16. Bharatha Natyam by Raghunandan.S, Aparajita Sarma, Meghna Venkat, Odissi by Manasi Pandya, 'BILVA' Dance Drama by Articulate & Sai arts international. Kathak by Bharatiya vidya bhavan students who are disciples of Chitra Venugopal.1 Oct: 17th Sai Nrityotsava. Bharathanatyam by Mrs. Aparna Vinod, Rukmini Vijay Kumar, Parshwanath Upadhya , kathak by Praroha Kathak natyalaya, Mohiniyattam by Vipina ramachandran, Odissi by Meghana Das and vandana Supriya, Rudraksha Dance Drama by Articulate and Sai arts international. Venue: Malleswaram Seva Sadan, Bangalore**.**
- **10th Sept:** Prateeksha kashi performance at Gyan Manch, Kolkatta as part of Ankur. **9th Oct**: Vyjayanthi Kashi and Ms. Prateeksha Kashi presents Paramara a unique Kuchipudi dance feature at of Ninasam, Heggodu. **12th Oc**t: Kuchipudi by Vyjayanti and Prateeksha kashi. Venue: Padmavathi Kalanikethan, Matthikere, Bangalore.
- **15th Sept :** Bharathanatyam dance recital by Shweta venkatesh at nayana ranga mandira kannada bhavana, j.c road, bangalore.
- **18th Sept:** Bharatanatyam dance recital by Koothoor.R.Venkata Subramaniam, Rechita nrutyalaya on the occassion of brahmothsavams ttd tirupathi at mahathi auditorium tirupathi.
- **18th Sept :** Bharathanatyam Rangapravesha by Rashu and Shushma , disciple of R. Vasudev., Guru guha gana natyanilayam. Venue: ADA Rangamandira, Bangalore.
- Shila Mehta, Mumbai tours USA 22nd sept- mid- Oct 10 & Belgium in Nov10 for Kathak Dance performances , Lecture Demonstrations & workshops.
- **1st to 10th Oc**t: The Bangalore International Festival by AIM organization. Programmes : JugalBandi by T.M.Krishna and Ustad Rashid Khan, play by Lillete Dubey, "Floored by Art" by Menaka Gandi and Sunil Seth, performances by PadmaShri Shobana, Shri.Ganesh and Kumaresh, Gerard Mechado, Sri.Pravin Godkhindi, Smt.B.Jayashree, Smt.M.D.Pallavi, Kathak Kendra, PadmaShri Geeta Chandran, Sri.UnniKrishnan, Sri. Anil Srinivasan, PadmaShri Dr.Ananda Shankar Jayant, Smt.Prathibha Prahlad, Groups from Sri Lankan and Peru,and many more. Venue : Sheesha mahala palace, chowdaiah memorial hall, opus- palace road, Freedom park, Mangala mantapa, UB city, Taj west end.
- **27 ಸೆಪ್ಟೆಂಬರ್–ಅಕ್ಟೋಬರ್ 3**: ಕುರಿಯ ವಿಟ್ಠಲ ಶಾಸ್ತ್ರಿ ಯಕ್ಷಗಾನ ಪ್ರತಿಷ್ಠಾನದ ವತಿಯಿಂದ ಯಕ್ಷಪ್ರಭಾ ಸಹಯೋಗದೊಂದಿಗೆ ಡಾ. ಪ್ರಭಾಕರ ಜೋಷಿ ಅವರ ಯಕ್ಷಗಾನ ಅರ್ಥ ಸರಣಿ. ಸ್ಥಳ: ರಾಮಕೃಷ್ಣ ಸಭಾಂಗಣ, ಉಜಿರೆ, ದ.ಕ.
- **3 ಅಕ್ಟೋಬರ್** – ಪುತ್ತೂರಿನ ಕು. ತೇಜಸ್ವಿನ ಅವರಿಂದ 'ಆನಂದ ನರ್ತನ' ಕಾರ್ಯಕ್ರಮ. ಸ್ಥಳ – ನಟರಾಜ ವೇದಿಕೆ, ಪುತ್ತೂರು. ✪

# ದರ್ಪಣ

## ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣೀ



ಕಳೆದ ಸಂಚಿಕೆಯಲ್ಲಿ.....

**(ನೃತ್ಯದ ಸಂಯೋಜನಾ ಕಲ್ಪನೆಗೆ ಪುರಾಣ, ಶಿಲ್ಪಕಲೆ– ಪ್ರತಿಮಾಶಾಸ್ತ್ರಗಳ ಆಳವಾದ ಅಧ್ಯಯನ ಬೇಕು ಎಂಬುದು ರುಕ್ಮಿಣೀಯವರ ಅಭಿಮತ. ಗುರು ಶಿಷ್ಯ ಪರಂಪರೆಯೇ ಮುಖ್ಯವೆಂಬುದು ಅವರ ಅನಿಸಿಕೆ. ಶಿಷ್ಯರನ್ನೆಲ್ಲಾ ಸ್ವಂತ ಮಕ್ಕಳಂತೆಯೇ ಬೆಳೆಸಿದ ರುಕ್ಮಿಣಿ ; ಸಂಗೀತ ಮನೆತನದವರಲ್ಲದ ಕಲಾವಿದರಿಗೂ ವೇದಿಕೆಗಳಲ್ಲಿ ಅವಕಾಶ ಕೊಟ್ಟರು. ಭಾರತದ ಎಲ್ಲಾ ದೇಶೀಯ, ಸಾಂಪ್ರದಾಯಿಕ ಕಲೆಗಳು ಪುನರುಜ್ಜೀವನ ಕಾಣಬೇಕು ಎಂಬ ಅವರ ಧ್ಯೇಯ 1937ರಲ್ಲಿಯೇ ಕಾರ್ಮಿಕ ಮತ್ತು ಕೈಗಾರಿಕಾ ಇಲಾಖೆಯ ಮೂಲಕ ನೇಯ್ಗೆ ಕೇಂದ್ರಕ್ಕೆ ಬುನಾದಿ ಹಾಕಿತ್ತು. ಅವರ ಮುಂದಾಳತ್ವದಲ್ಲಿ ಬೆಳಕು ಕಂಡ ಕಲಾಕ್ಷೇತ್ರ ಸೀರೆ ಉದ್ಯಮ ವ್ಯಾಪಕ ಪ್ರಸಿದ್ಧಿ ಪಡೆಯಿತು. ಕಲಾಂಕಾರಿ ಎಂಬ ಈ ಕರಕುಶಲ ವಸ್ತು ಅಧ್ಯಯನ ಮತ್ತು ತಯಾರಿಕಾ ಕೇಂದ್ರ ರುಕ್ಮಿಣೀ ಅವರ ಪ್ರಯತ್ನಗಳಿಗೆ ಮತ್ತೊಂದು ಕೈಗನ್ನಡಿ.**

**ಕ್ರಮೇಣ ನೃತ್ಯದೊಂದಿಗೇ ನಿರಂತರ ಶಿಕ್ಷಣದ ಅಗತ್ಯವರಿತು 5 ವರ್ಷಗಳ ಸಂಸ್ಕೃತ, ಸಂಗಿತ, ಚಿತ್ರಕಲೆ, ತಾಳವಾದ್ಯಗಳನ್ನೊಳಗೊಂಡ ಕೋರ್ಸ್ ಪ್ರಾರಂಭಿಸಿದರು. ವೇದಿಕೆಗೆ ನೀಲಿ ಬಣ್ಣದ ಪರದೆಗಳ ಬಳಕೆ, ಬೆಳಕಿಗೆ ಜಿಲೆಟಿನ್, ನಟ್ಟುವನ್ನಾರ್ ಮತ್ತು ಹಿನ್ನಲೆ ವಾದ್ಯದದವರನ್ನು ವೇದಿಕೆಯ ಬಲಬದಿಗೆ ಕುಳಿತುಕೊಳ್ಳುವಂತೆ ಮಾಡಿದ್ದು, ಎಂದಿಗೂ ಯಾರೂ ಯೋಚಿಸದಿದ್ದ ' ಡ್ಯಾನ್ಸ್ ಆಫ್ ನಟರಾಜ' ಮುಂತಾದ ಸಂಯೋಜನೆಗಳು ಅವರ ಕೊಡುಗೆಗಳು.)**

ಕುಟ್ರಾಲ ಕೊರವಂಜಿಯ ಅದ್ಭುತ ಯಶಸ್ಸಿನ ನಂತರದ ಅವರ ನೋಟ ಕಾಳಿದಾಸನ ಕುಮಾರಸಂಭವಂ. ಅದರಲ್ಲಿ ಸ್ವತಃ ರುಕ್ಮಿಣೀಯವರದ್ದೇ ನಾಯಕಿ ಪಾತ್ರ ! ಕಾಳಿದಾಸನ ಕಾವ್ಯಕ್ಕೆ ಸಂಗೀತದ ಸ್ಪರ್ಶವನ್ನಿತ್ತವರು ಟೈಗರ್ ವರದಾಚಾರ್ಯರು. ಆಗ ಅವರು ಕಲಾಕ್ಷೇತ್ರದ ಪ್ರಾಚಾರ್ಯರಾಗಿದ್ದರು. 1947ರಲ್ಲಿ ಸಂಯೋಜಿಸಲ್ಪಟ್ಟ ಈ ರೂಪಕದಲ್ಲಿ ಅಭಿನಯಿಸುವ ಹೊತ್ತಿಗೇ ಅವರಿಗೆ 43 ವರ್ಷ ವಯಸ್ಸಾಗಿತ್ತು.

ರುಕ್ಮಿಣೀಯವರ ಮಿತ್ರ ಕೆ. ಚಂದ್ರಶೇಖರ್ ಅನಿಸಿಕೆಯಂತೆ 'ಅವರ ಕುಮಾರಸಂಭವಂನ ಪಾತ್ರಗಳು ಜೀವಂತವಾಗಿ ಎದ್ದು ಬಂದಂತೆ ಅನಿಸುತ್ತಿತ್ತು. ಶಿವ–ಪಾರ್ವತಿಯರ ಪಾತ್ರ ಚಲನೆಗಳು ಕಾವ್ಯದ ಶಕ್ತಿಯನ್ನು ತೋರಿಸಿಕೊಟ್ಟವು. ಆದರೆ ರುಕ್ಮಿಣೀಯವರ ಪಾತ್ರಗಳಲ್ಲಿ ಆಗಾಗ್ಗೆ ಬದಲಾವಣೆಗಳನ್ನು ಮಾಡುತ್ತಲೇ ಇರುವುದಕ್ಕೆ ಅವಕಾಶವಿರಲಿಲ್ಲ.'

ಸಾಮಾನ್ಯವಾಗಿ ಪ್ರೇಕ್ಷಕರು ಕುಮಾರ ಸಂಭವಂನಂತಹ ರೂಪಕಗಳಲ್ಲಿ ಅಳವಡಿಸುವ ನೃತ್ಯ ತಂತ್ರಗಳೇ ಅದರ ಯಶಸ್ಸಿಗೆ ದಾರಿ ಎಂದು ಭಾವಿಸಿದ್ದರು. ಆದರೆ ರುಕ್ಮಿಣೀ ಅವರೇ ಹೇಳುವಂತೆ ತಂತ್ರಗಳಿಗಿಂತಲೂ ಮುಖ್ಯವಾಗಿ ಮಹತ್ತರವಾದದ್ದು ಅವರ್ಣನೀಯವೆನಿಸುವ ಭಾವೋತ್ಪತ್ತಿ ಮತ್ತು ರಸದ ಹರುಷವೇ ಎಲ್ಲಾ ರೂಪಕಗಳ ಯಶಸ್ಸಿಗೆ ಕಾರಣ. ನಮ್ಮ ದೇಹವನ್ನೇ ಮರೆತು ಪಾತ್ರಗಳೊಳಗೆ ಒಂದಾಗಿ ಹೋಗುವುದೇ ರೂಪಕಗಳನ್ನು ಜೀವಂತವಾಗಿರಿಸುತ್ತದೆ.

ಸಂಸ್ಕೃತ ಕಾವ್ಯಗಳನ್ನು ದೃಶ್ಯಾತ್ಮಕವಾಗಿ ಪುನರ್ ನಿರ್ಮಾಣ ಮಾಡುವಲ್ಲಿ ಕಲಾಕ್ಷೇತ್ರ ದಿಟ್ಟ ಹೆಜ್ಜೆಯನ್ನಿಟ್ಟು ನಮ್ಮ ಸಂಸ್ಕೃತಿಗೆ ಜೀವ ಕೊಡುವ ಕೆಲಸವಾಗಬೇಕು ಎಂಬ ಅಭೀಪ್ಸೆಯಿತ್ತು. ಈ ನಿಟ್ಟಿನಲ್ಲಿ ಸಂಸ್ಕೃತ ಕಾವ್ಯ ಮತ್ತು ಪಠ್ಯಗಳನ್ನು ಓದಬೇಕು ಎಂಬ ಪಂಡಿತ ಸುಬ್ರಹ್ಮಣ್ಯ ಶಾಸ್ತ್ರಿಗಳ ಒತ್ತಾಯ ಮತ್ತು ಅವರು ತಮ್ಮ ಬಳಿಯಲ್ಲಿದ್ದ ಪುಸ್ತಕಗಳನ್ನು ನೀಡುತ್ತಿದ್ದುದ್ದು ರುಕ್ಮಿಣೀಯವರಿಗೆ ಸಾಕಷ್ಟು ನೆರವು ನೀಡಿತ್ತು. ಕುಮಾರ ಸಂಭವಂಗಾಗಿ ಶಾಸ್ತ್ರಿಗಳು ಸ್ವತಃ ಕಾವ್ಯವನ್ನು ಓದಿ ಅರ್ಥ ವಿವರಿಸಿದ್ದರಂತೆ ಕೂಡಾ. ನಂತರ ನೃತ್ಯದ ವಸ್ತುವಿಗೆ, ಸಂಯೋಜನೆಗೆ



ಸಾದಿರ್ ನೃತ್ಯಗಾತಿಯರು, ನಟ್ಟುವನ್ನಾರ್ ಮತ್ತು ಹಿನ್ನಲೆ ವಾದ್ಯಗಾರರು. ನರ್ತಕಿಯರ ಹಿಂದೆ ನಿಂತು ನಟುವಾಂಗ ಮಾಡುವ ಕ್ರಮ

ಅನುಕೂಲವಾಗುವಂತೆ ನಾರಾಯಣ ಶರ್ಮ ಮತ್ತು ವೆಂಕಟಾಚಲ ಶರ್ಮರು ಜೊತೆಗೂಡಿ ಪಠ್ಯವನ್ನು ತಯಾರಿಸಿದರು. ಉಳಿದವರು ನೃತ್ಯದ ವಸ್ತುವಿಗೆ, ಸಂಯೋಜನೆಗೆ, ಸಂಕಲನಕ್ಕೆ ಸಹಕರಿಸುತ್ತಿದ್ದರಾದರೂ ರೂಪಕ ನಿರ್ವಹಣೆಯ ಪೂರ್ಣ ಜವಾಬ್ದಾರಿ ರುಕ್ಮಿಣೀಯವರ ಹೆಗಲ ಮೇಲಿರುತ್ತಿತ್ತು.

ಕಲಾಕ್ಷೇತ್ರದ ಸಂಯೋಜನೆಗಳಿಗೆ ನಾಟ್ಯ ಶಾಸ್ತ್ರದಂತಹ ನಾಟ್ಯಾಧಾರಿತ ಪುರಾತನ ಗ್ರಂಥಗಳ ಪ್ರಭಾವ ಅಷ್ಟಾಗಿ ಏನೂ ಇರುತ್ತಿರಲಿಲ್ಲವಂತೆ. ನಾಟ್ಯಶಾಸ್ತ್ರಕ್ಕೂ, ರುಕ್ಮಿಣೀಯ ಸಂಯೋಜನೆ ಗಳಿಗೂ ಕೊಂಡಿ ಇರಲಿಲ್ಲ. ಅದೇ ಕೂಡಿಯಾಟ್ಟಂ ನಾಟ್ಯಪ್ರಕಾರ ನಾಟ್ಯಶಾಸ್ತ್ರವನ್ನೇ ಯಥಾವತ್ತಾಗಿ ಅನುಕರಿಸಿತ್ತು. ಇವತ್ತಿಗೂ ಕೂಚಿಪುಡಿಯಲ್ಲಿ ಇದರ ಅಂಶಗಳನ್ನು ಕಾಣಬಹುದು.

ರುಕ್ಮಿಣೀಯವರ ಶಿಷ್ಯ ಶಂಕರ್ ಮೆನನ್ ಹೇಳುವಂತೆ ರುಕ್ಮಿಣೀ ನಾಟ್ಯಶಾಸ್ತ್ರವನ್ನು ಅಷ್ಟಾಗಿ ಓದಿ ಗಮನಿಸಿದವರೇ ಅಲ್ಲ. ಅವರ ಬಹುಪಾಲು ಸಂಯೋಜನೆಗಳು ನಾಟ್ಯಶಾಸ್ತ್ರದ ಆತ್ಮಕ್ಕೆ, ಅದು ಹೇಳುವ ಸಿದ್ಧಾಂತ ನಿಯಮಗಳಿಗೆ ಅನುರೂಪವಾಗಿ ಇರಲಿಲ್ಲ ; ಬದಲಾಗಿ ಕಂಡೂ ಕಾಣದಂತೆ ನಿರ್ಲಿಪ್ತ ಮಾರ್ಗವನ್ನು ಅನುಸರಿಸುತ್ತಿದ್ದವು. ಉದಾ: ಭರತ ತನ್ನ ನಾಟ್ಯಶಾಸ್ತ್ರದ ಪ್ರಕಾರ ವೇದಿಕೆಯಲ್ಲಿ ಮರಣದಂತಹ ಸನ್ನಿವೇಶಗಳ ನಿರ್ಮಿತಿಯನ್ನು ಮಾಡಬಾರದು ಎಂದು ಹೇಳಿದ್ದಾನೆ. ಆದರೆ ರುಕ್ಮಿಣೀಯವರು ನಿರ್ಮಿಸಿದ ರಾವಣನಂತಹ ಪಾತ್ರಗಳಲ್ಲಿ ಸಾವು ಸಾಮಾನ್ಯ ಅಭಿವ್ಯಕ್ತಿ. ಹಾಗಾಗಿ ಕಲಾಕ್ಷೇತ್ರದ ಸಂಯೋಜನೆಗಳಲ್ಲಿ, ಅಭಿನಯದಲ್ಲಿ ಅಗತ್ಯವಿರುವೆಡೆ ಜಾನಪದವನ್ನೂ ತಕ್ಕಮಟ್ಟಿಗೆ ಅಳವಡಿಸಿಕೊಳ್ಳಲಾಗಿದ್ದು ಕ್ಲಾಸಿಸಿಸಂನ ಪ್ರಭಾವವೇ ಹೆಚ್ಚು. ಆದರೂ ಅಲ್ಲಲ್ಲಿ ನಾಟ್ಯಶಾಸ್ತ್ರದ ಸ್ಪರ್ಶವಿಲ್ಲದೆಯಿಲ್ಲ.


ಅಡ್ಯಾರ್ ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿದ್ದ ಸಂಸ್ಕೃತ ವಿದ್ವಾನ್ ಕುಂಜುಣ್ಣಿ ರಾಜ ಅವರು ಒಮ್ಮೆ ಹೀಗೆ ಹೇಳಿದ್ದರು– 'ಕಲಾಕ್ಷೇತ್ರದ ನೃತ್ಯ ರೂಪಕಗಳನ್ನು ನಾಟ್ಯಶಾಸ್ತ್ರದ ಆಧಾರದ ಜೊತೆಗೆ ಪರಸ್ಪರ ತುಲನೆ ಮಾಡುವಲ್ಲಿ ಸಾಕಷ್ಟು ಸಂಶೋಧನೆ ಮಾಡಲು ಅವಕಾಶವಿದೆ. ಈ ಮೂಲಕವಾಗಿ ನಾಟ್ಯಶಾಸ್ತ್ರವನ್ನು ಮತ್ತಷ್ಟು ಆಳವಾಗಿ ಅರ್ಥ ಮಾಡಿಕೊಂಡಂತಾಗುತ್ತದೆ. ಭರತನಾಟ್ಯ ಅಥವಾ ಸದಿರ್ ಮೂಲತಃ ಏಕವ್ಯಕ್ತಿ ಪ್ರದರ್ಶನವಾಗಿ ತಂಜಾವೂರು ಆಸ್ಥಾನಗಳಲ್ಲಿ ಬೆಳೆದದ್ದು ; ಶಿಲಪ್ಪದಿಗಾರಂನ ಆಧಾರದಲ್ಲಿ ಹೆಚ್ಚಿನ ಬೆಳವಣಿಗೆ ಕಂಡದ್ದು. ರುಕ್ಮಿಣೀ ಈ ಮಾಧ್ಯಮವನ್ನೇ ಬಳಸಿ ನಾಟ್ಯರೂಪದಲ್ಲಿ ಹೊಸ ಮಾರ್ಗವನ್ನು ಕಂಡುಹಿಡಿದರು. ಇದರಿಂದಾಗಿ ಕೊರವಂಜಿಯಂತಹ ಜಾನಪದೀಯ ನೆಲೆಗಳು ಶಾಸ್ತ್ರೀಯವಾಗಿಯೂ, ಸಂಸ್ಕೃತೀಕರಣವಾಗಿಯೂ ನೆಲೆ ಪಡೆದವು.

ಈ ಹಿನ್ನಲೆಯಲ್ಲಿ ರುಕ್ಮಿಣೀ ತಕ್ಕಮಟ್ಟಿಗೆ ಕೇರಳದ ಕಥಕಳಿ ಮತ್ತು ಕೂಡಿಯಾಟ್ಟಂನಿಂದಲೂ ಪ್ರಭಾವಿತರಾಗಿದ್ದರು. ನೃತ್ಯರೂಪಕಗಳಿಗೆ ಈ ಕಲಾಪ್ರಕಾರಗಳು ಹೆಚ್ಚಿನ ಪೂರಕ ತಂತ್ರಗಳನ್ನು ಒದಗಿಸುವುದಲ್ಲದೆ ಈ ಕಲೆಗಳಿಂದ ಎಷ್ಟೋ ಸಾಧ್ಯತೆಗಳನ್ನು ಅನ್ವೇಷಣೆ ಮಾಡಬಹುದು. ಕಥಕಳಿ ಮೂಲತಃ ನಾಟ್ಯಪ್ರಕಾರವಾಗಿದ್ದು ಅದನ್ನು ಕಲಿಯುವುದರಿಂದ ಮುಖಭಾವ ಮತ್ತಷ್ಟು ವಿಕಸಿತವಾಗುವುದಲ್ಲದೆ ; ಮೆಲೋಡ್ರಾಮಾದ ಅಂಶಗಳನ್ನು ಸಾಧಿಸಬಹುದು. ಆದ್ದರಿಂದಲೋ ಏನೋ ಕಲಾಕ್ಷೇತ್ರದ ಪ್ರಾರಂಭಿಕ ದಿವಸಗಳಲ್ಲಿ ರುಕ್ಮಿಣೀ ತಮ್ಮ ವಿದ್ಯಾರ್ಥಿ ಗಳಿಗೆ ಭರತನಾಟ್ಯದೊಂದಿಗೆ ಕಥಕಳಿಯನ್ನು ಕಲಿಯುವಂತೆ ಕಡ್ಡಾಯಗೊಳಿಸಿದ್ದರು ಎನ್ನುತ್ತಾರೆ ಶಾರದಾ ಹಾಪ್‌ಮನ್.

(ಸಶೇಷ)

ರಂಗಸ್ಥಳ

# ಋತುಪರ್ಣನನ್ನು ಕಾಣುವಾಗ ನೆನಪಾಗುವುದು ರೈಗಳು!



ನಮ್ಮ ರಾಜ್ಯದಲ್ಲಿ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡಗಳೆಂಬ ಎರಡು ಜಿಲ್ಲೆಗಳಿವೆಯಲ್ಲ ನಿಜಕ್ಕೂ ಇವು ಕಲಾಮಾತೆಯ ರಂಗಭೂಮಿಯೇ ಹೌದು. ನೀವು ಬೇಕಾದರೆ ಯೋಚಿಸಿ ನೋಡಿ. ನೃತ್ಯ, ನಾಟಕ, ಸಂಗೀತ...ಹೀಗೆ ಎಲ್ಲವೂ ಇಲ್ಲೇ ಮನೆಮಾಡಿವೆ. ಯಕ್ಷಗಾನವಂತೂ ಇಲ್ಲಿ ಅಬ್ಬರಿಸಿ ಕುಣಿಯುತ್ತದೆ. ಈಗ ಯಕ್ಷಗಾನ ತುಸು ಕಳೆಗುಂದಿದಂತೆ ಕಾಣುತ್ತಿರುವುದು ಹೌದಾದರೂ ಒಂದು ಕಾಲದಲ್ಲಿ ಈ ಎರಡೂ ಕನ್ನಡಗಳ ಯಾವುದೇ ಮನೆಯ ಮುಂದೆ ಹೋಗಿ ಚೆಂಡೆ ಬಾರಿಸಿದರೂ ಅಲ್ಲೊಬ್ಬ ಕಲಾವಿದನ ಪ್ರವೇಶವಾಗುತ್ತಿತ್ತು! ಅಂಥ ಸಮೃದ್ಧ ಸಿರಿಯ ಬೀಡು ಈ ಎರಡು ಕನ್ನಡಗಳು! ತಮಾಷೆಯೆಂದರೆ ಈಗಲೂ ಹಿರಿಯರೆಲ್ಲಾ ಒಂದೆಡೆ  ಕೂತು ಮಾತನಾಡಲು ತೊಡಗಿದರೆ ಮಾತಿನ ಮಧ್ಯದಲ್ಲಿ ಯಕ್ಷಗಾನದ ಪ್ರವೇಶ ಆಗದಿರದು. ತೀರಾ ಇತ್ತೀಚೆಗಿನ ತಲೆಮಾರನ್ನು ಬಿಟ್ಟರೆ ಎಲ್ಲರೂ ಯಕ್ಷಗಾನದ ಹುಚ್ಚರೇ!

ಬರೀ ದಕ್ಷಿಣ ಕನ್ನಡವನ್ನೇ ಬೇಕಾದರೂ ಗಮನಿಸಿ. ಯಾವ ಮನೆಯಲ್ಲಿ ಕಲಾವಿದ ಇಲ್ಲ ಹೇಳಿ? ಒಂದೊಮ್ಮೆ ಈಗ್ಗೆ ಐದಾರು ವರ್ಷಗಳಿಂದ ಇಲ್ಲದಿದ್ದರೂ ಈ ಹಿಂದೆ ಇರಲಿಲ್ಲವಾ ಕೇಳಿ. ಖಂಡಿತ ಪ್ರತಿ ಮನೆಯಲ್ಲೂ ಒಂದೊಂದು ಅಸಾಧಾರಣ ಪ್ರತಿಭೆ ಲಂಗರು ಹಾಕಿ ಕೂತಿರುತ್ತಿತ್ತು. ಎಲ್ಲೋ ಗ್ರಾಮೀಣ ಪ್ರದೇಶದ ಯಾವುದೋ ಮೂಲೆಯಲ್ಲೂ ಯಕ್ಷಗಾನದ ಧೀಂಕಿಟ! ಭಾಗವತಿಕೆಯ ಇಂಪು!

ನಿಮಗೆ ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿನ ಅಳಿಕೆಯ ಬಗೆಗೆ ಖಂಡಿತಾ ಗೊತ್ತಿರುತ್ತದೆ. ಸತ್ಯಸಾಯಿ ವಿದ್ಯಾಕೇಂದ್ರದ ಹಿನ್ನಲೆಯಲ್ಲಿ ಆ ಊರಿಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕಿದೆಯೆಂದರೂ ತಪ್ಪಲ್ಲ. ಆದರೆ ಒಂದು ಕಾಲದಲ್ಲಿ ಬಹಳ ಅಂದರೆ ಬಹಳ ಕುಗ್ರಾಮವೆನಿಸಿದ್ದ ಪ್ರದೇಶ ಅದು. ವಿದ್ಯಾಕೇಂದ್ರ, ಸಾಯಿಬಾಬಾ ಕೃಪೆಯಿಂದ ದತ್ತವಾದ ಒಳ್ಳೆಯ ಆಸ್ಪತ್ರೆ, ಒಂದು ಬ್ಯಾಂಕು ಬಿಟ್ಟರೆ ಈಗಲೂ ಅಳಿಕೆಯಲ್ಲಿ ವಿಶೇಷ ಅನಿಸುವಂತಹ ಯಾವುದೇ ಸಂಗತಿಗಳು ಇಲ್ಲ. ಆದರೆ ಇಂಥ ಅಳಿಕೆಯಲ್ಲಿ ತೆಂಕುತಿಟ್ಟಿನ ಯಕ್ಷಪರಂಪರೆಗೇ ಒಂದು ಅಚ್ಚಳಿಯದ ನೆನಪನ್ನು ಬಿಟ್ಟುಹೋದ ಕಲಾವಿದನೊಬ್ಬನಿದ್ದನೆಂದರೆ ನಂಬಲೇ ಬೇಕು! ಹೌದು ಅಪ್ರತಿಮ ಕಲಾವಿದ ರಾಮಯ್ಯ ರೈ ಇದೇ ಅಳಿಕೆಯವರು!



**ದಾಮೋದರ ಮಂಡೆಚ್ಚರ ಭಾಗವತಿಕೆಯಲ್ಲಿ ಋತುಪರ್ಣನಾಗಿ ಅಳಿಕೆ ರಾಮಯ್ಯ ರೈಗಳು, ಬಾಹುಕನಾಗಿ ಮಿಜಾರು ಅಣ್ಣಪ್ಪ, ಚೆಂಡೆಯಲ್ಲಿ ನಿಡ್ಲೆ ನರಸಿಂಹ ಭಟ್**

ಹಿರಿಯ ಯಕ್ಷಕಲಾಭಿಮಾನಿಗಳಿಗೆ ಈಗಲೂ ಗೊತ್ತಿರಬಹುದು. ಅಳಿಕೆ ರಾಮಯ್ಯ ರೈಗಳೆಂದರೆ ಅಲ್ಲೊಂದು ಗತ್ತು ಇರುತ್ತಿತ್ತು. ಅವರು ರಂಗಕ್ಕೆ ಬರುವಾಗ ಅದೆಷ್ಟು ಮಂದಿ ರೋಮಾಂಚಿತರಾಗುತ್ತಿದ್ದರೋ

ಗೊತ್ತಿಲ್ಲ. ಅವರ ಹಾವಭಾವ ಅದಕ್ಕಿಂತ ಮುಖ್ಯವಾಗಿ ಅವರ ಅಭಿನಯ ಆ ನಿಶೆಯಲ್ಲಿ ನೆರೆದಿದ್ದವರೆಲ್ಲಾ ನಶೆ ಯೇರಿಸುತ್ತಿತ್ತು. ರಾಮಯ್ಯ ರೈಗಳು ಅದೆಷ್ಟು ಅಭಿಮಾನಿ ಗಳನ್ನು ಹೊಂದಿದ್ದರೋ ಅವರಿಗೇ ಲೆಕ್ಕವಿದ್ದಿರಲಿಕ್ಕಿಲ್ಲ. ಅವರು ಇದ್ದಾರೆಂದೇ, ಅವರ ವೇಷ ನೋಡಲಿಕ್ಕೆಂದೇ ಅನೇಕ ಮಂದಿ ಆ ದಿನಗಳಲ್ಲಿ ಯಕ್ಷಗಾನಕ್ಕೆ ತೆರಳುತ್ತಿದ್ದರೆಂದು ಹಿರಿಯರು ಸುಮ್ಮನೆ ಹೇಳಲಿಕ್ಕಿಲ್ಲ ಬಿಡಿ. ಅಂಥ ಕಲಾವಿದ ಶ್ರೇಷ್ಟ ಅವರು.



ಬಲಿಪರ ಭಾಗವತಿಕೆಯಲ್ಲಿ ಶ್ರೀ ಅಳಿಕೆ ರಾಮಯ್ಯ ರೈಗಳ ಪೀಠಿಕೆ ವೇಷ

ಸ್ವಾರಸ್ಯಕರ ಸಂಗತಿಯೇನು ಗೊತ್ತಾ? ನಿಮಗೆ ನಳದಮಯಂತಿ ಕಥೆ ಗೊತ್ತಿರಬಹುದು. ಆ ಪ್ರಸಂಗದಲ್ಲಿ ಬರುವ ಋತುಪರ್ಣ ಅರಸನ ಬಗೆಗೂ ನೀವು ಕೇಳಿರಬಹುದು. ಆ ಪಾತ್ರಕ್ಕೆ ಸರಿಯಾದ ನೆಲೆಗಟ್ಟು ಕೊಟ್ಟು, ತಮ್ಮ ಅಪೂರ್ವ ಪರಿಕಲ್ಪನೆಯ ಋತುಪರ್ಣನನ್ನು ರಂಗಸಾಕ್ಷಾತ್ಕಾರಗೊಳಿಸಿದವರು ಈ ರಾಮಯ್ಯ ರೈಗಳು. ಋತುಪರ್ಣನೆಂದರೆ ಹೀಗೆ, ಆ ಪಾತ್ರದ ಗಂಭೀರತೆ, ಅಭಿನಯ, ಮಾತುಗಾರಿಕೆ ಹೀಗಿರಬೇಕು ಅಂತ ತೋರಿಸಿಕೊಟ್ಟವರೇ ಈ ರೈಗಳು. ಕಾಡಿನ ಮಧ್ಯದಲ್ಲೂ ಅರೆಕ್ಷಣದಲ್ಲಿ ರುಚಿಕರ ಅಡುಗೆ ಸಿದ್ಧವಾದಾಗ, ತನ್ನ ಅಂಗವಸ್ತ್ರ ಬಿದ್ದ ಕ್ಷಣಾರ್ಧದೊಳಗೇ ರಥ ಊಹಿಸಲಸಾಧ್ಯ ದೂರ ಕ್ರಮಿಸಿಬಿಟ್ಟಿದೆಯೆಂದು ತಿಳಿದಾಗ ರೈಗಳ ಋತುಪರ್ಣ ಬಾಹುಕನನ್ನು ಪ್ರಶ್ನಿಸುತ್ತಿದ್ದ ರೀತಿ ಮನೋಜ್ಞವಾಗಿರುತ್ತಿತ್ತು. ಆ ಪ್ರಶ್ನೆಗಳಲ್ಲಿ ವ್ಯಕ್ತಪಡಿಸುತ್ತಿದ್ದ ಅಚ್ಚರಿ, ಬೆರಗು, ಕೌತುಕ, ರೋಮಾಂಚನ, ಚಿಂತೆ, ಸಂತಸ...ಹೀಗೆ ಎಲ್ಲವೂ ಅಚ್ಚಳಿಯದ ನೆನಪುಗಳೇ ಎನ್ನುತ್ತಾರೆ ಆ ಅದ್ಭುತವನ್ನು ಕಣ್ಣಿನಲ್ಲಿ ಕಟ್ಟಿಕೊಂಡವರು.



ಎಪ್ಪತ್ತರ ತಲೆಮಾರಿನ 'ಯಕ್ಷ ದಿಗ್ಗಜರು ಮತ್ತು ಯಕ್ಷ ಪೋಷಕರು' ಕುಳಿತವರು (ಎಡದಿಂದ ಬಲಕ್ಕೆ ): ಶ್ರೀಯುತರಾದ ನಿಡ್ಲೆ ನರಸಿಂಹ ಭಟ್, ಬೋಳಾರ ನಾರಾಯಣ ಶೆಟ್ಟಿ, ವಿಟ್ಲ ಗೋಪಾಲಕೃಷ್ಣ ಜೋಶಿ, ಎಂ. ನಾರಾಯಣ ಭಟ್ ಅಳಿಕೆ, ಬಲಿಪ ನಾರಾಯಣ ಭಾಗವತ, ಅಳಿಕೆ ರಾಮಯ್ಯ ರೈ, ಕದ್ರಿ ವಿಷ್ಣು ಮೊದಲ ಸಾಲಿನಲ್ಲಿ ನಿಂತವರು : ಶ್ರೀಯುತರಾದ ಎಂ. ವಾಸುದೇವ ಪ್ರಭು, ಕೆ. ಸಂಜೀವ ಶೆಟ್ಟಿ, ಗೋಪಾಲಕೃಷ್ಣ ಕುರುಪ್, ಬಣ್ಣದ ಕುಟ್ಯಪ್ಪು, ಕೋಳ್ಯೂರು ರಾಮಚಂದ್ರ ರಾವ್, ಕೆ. ವಿ. ಸುಬ್ಬಾ ರಾವ್, ಅಡ್ಕಸ್ಥಳ ನಾರಾಯಣ ಶೆಟ್ಟಿ
ನಿಂತವರಲ್ಲಿ ಕೊನೆಯ ಸಾಲು : ಶ್ರೀಯುತರಾದ ಡೊಂಬ, ಯು. ಗಂಗಾಧರ ಭಟ್, ಕೇದಗಡಿ ಗುಡ್ಡಪ್ಪ ಗೌಡ, ಪಡ್ರೆ ಕುಮಾರ ಮತ್ತು ಪಡ್ರೆ ಚಂದು

ಹಾಗಾಗಿ ರೈಗಳ ಋತುಪರ್ಣನನ್ನು ನೋಡಿದವರಿಗೆ ಇಂದಿನ ಯಾವುದೇ ಋತುಪರ್ಣನನ್ನು ನೋಡಿದರೂ ರೈಗಳು ಇರಬೇಕಿತ್ತೆನಿಸುತ್ತದೆ. ಕೆಲವೊಮ್ಮೆ ರೈಗಳನ್ನೇ ಕಂಡಂತಾಗುತ್ತದೆ. ಯಾಕೆಂದರೆ ಈಗ ನಾವು ರಂಗದಲ್ಲಿ ನೋಡುತ್ತಿರುವ ಬಹುತೇಕ ಋತುಪರ್ಣರು ರೈಗಳ ಕಲ್ಪನೆಗಳು! ಅವರ ಕಲ್ಪನೆಯ ಎಸಳುಗಳು ಈಗಿನ ಅನೇಕ ಋತುಪರ್ಣರಲ್ಲಿ ಅಲ್ಲಿಲ್ಲಿ ಕಾಣಿಸುತ್ತಲೇ ಇರುತ್ತವೆ. ಅವರು ಹಾಕಿಕೊಟ್ಟ ನೆಲೆಗಟ್ಟಿನಿಂದ ಹೊರಬರಲು ಇಂದಿಗೂ ಬಹಳಷ್ಟು ಋತುಪರ್ಣರಿಗೆ ಆಗಿಲ್ಲ!! ಅಂಥವರು ನಮ್ಮ ರಾಮಯ್ಯ ರೈಗಳು.

ಬರೀ ಋತುಪರ್ಣ ಅಂತಲ್ಲ. ಹನುಮಂತ, ರಾಮ, ಕೃಷ್ಣ, ಈಶ್ವರ ಮೊದಲಾದ ಪಾತ್ರಗಳ ಮೂಲಕವೂ ರೈಗಳು ಅಭಿಮಾನಿಗಳ ಮನದಂಗಳದಲ್ಲಿ ಅಜರಾಮರರಾಗಿದ್ದಾರೆ. ಆ ಎಲ್ಲಾ ಪಾತ್ರಗಳಿಗೂ ಜೀವ ತುಂಬಿ ಕಂಗೊಳಿಸುವಂತೆ ಮಾಡಿದ ಅಗ್ಗಳಿಕೆ ಅವರದ್ದು.

ಈ ತೆಂಕುತಿಟ್ಟಿನ ಯಕ್ಷಗಾನ ಎಂಥೆಂಥ ಮೇರು ಕಲಾವಿದರ ರಂಗಸ್ಥಳವಾಗಿತ್ತು ಅಲ್ವಾ? ❄

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚ್ಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು-ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಕಮಿಷನ್ ಮೊತ್ತ 40/- ರೂ ಸೇರಿಸಿ ಕಳಿಸುವುದು. ಸಹಕರಿಸಿ.

| | |
|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : ರೂ. 100/- |
| ಪೋಷಕ | : ರೂ. 1,000/- |
| ಮುದ್ರಣ ನಿಧಿ ( ಮಹಾಪೋಷಕ) | : ರೂ . 3,500/- |

ಚಂದಾ/ಪೋಷಕ/ಮಹಾಪೋಷಕ

............................ ಸಾಲಿನ ಸದಸ್ಯನಾಗಲು / ಅಥವಾ ..................................................

.....ಈ ಸಾಲಿನಿಂದ ಪೋಷಕ/ ಮಹಾಪೋಷಕನಾಗಲು ಇಚ್ಛಿಸಿದ್ದು ಮೊತ್ತ ರೂ....................

..............................................................................ಗಳನ್ನು ಎಂ.ಒ/ಡಿಡಿ ಮೂಲಕವಾಗಿ ...

..............................................ದಿನಾಂಕದಂದು ಕಳಿಸಿರುತ್ತೇನೆ.

ವಿಳಾಸ : ....................................................................................................

..................................................................................................................

..................................................................................................................

ಸಹಿ/-

ನೂಪುರ ಭ್ರಮರಿಯ ಈ ಸಂಚಿಕೆ ನಿಮಗೆ ಉಚಿತ/ ಗೌರವ/ 2010ನೇ ಸದಸ್ಯ/ ಪೋಷಕ/ ಮಹಾಪೋಷಕ ಪ್ರತಿಯಾಗಿರುತ್ತದೆ. ನಿಮ್ಮ ಸದಸ್ಯತ್ವದ ನವೀಕರಣ ಶಾಶ್ವತ/........................... ............ದಂದು ಮಾಡಬೇಕಾಗಿರುತ್ತದೆ.

## ಮುದ್ರಾರ್ಣವ

ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; **1000**ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ– ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಸಂಶೋಧನಾ ಕೃತಿ.

ಬೆಲೆ : **250/-** ರೂ. ಸಂಪರ್ಕಿಸಿ. **99641 40927**


ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮ ಭಟ್,** ಉಡುಪಿ (ಮೊಬೈಲ್ : 9449592970 )
ಸಿ. **ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)
**ಪ್ರೊ. ವೆಂಕಟೇಶ್ ಪೈ,** ಮುಂಬೈ. ( ಮೊಬೈಲ್ : 098699 21397)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

**ನೂಪುರ ಭ್ರಮರಿಯ ಬಳಗವು**

**ಭರತನಾಟ್ಯ, ಮತ್ತು ನೃತ್ಯ ಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ**

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನು ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸ– ಪ್ರಾತ್ಯಕ್ಷಿಕೆಗಳನ್ನು ನೀಡುತ್ತಾ ಬಂದಿದ್ದು ; ಕಾರ್ಯಕ್ರಮಗಳಿಗಾಗಿ ಆಸಕ್ತರು/ಸಂಸ್ಥೆಗಳು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು.**

**ಮೊ : 99641 40927**




If not delivered please return to :

ನೂಪುರ ಭ್ರಮರಿ

'ಸಾನ್ನಿಧ್ಯ' ಪ್ರಕಾಶನ

ದೇಚೂರು ರಸ್ತೆ,

ಅಶ್ವತ್ಥಕಟ್ಟೆ ಸಮೀಪ

ಮಡಿಕೇರಿ, ಕೊಡಗು– 571201

ಫೋನ್ ನಂ : 9964140927

ವೆಬ್ ಸೈಟ್ :

www.noopurabhramari.com

ಈ ಮೈಲ್ ವಿಳಾಸ :

feedback@noopurabhramari.com

editor@ noopurabhramari.com